بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 43–44

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**26, ಅಕ್ಟೋಬರ್, 02 ನವೆಂಬರ್ 2023, 26 ಅಖಾ, ನಬುವ್ವತ್ 1402 ಹಿಜರಿ ಶಮ್ಸಿ, 10, 17 ರಬೀಉಲ್ ಆಖರ್ 1445 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ

وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَرَاَ الْمُجْرِمُوْنَ النَّارَ

فَظَنُّوْٓا اَنَّهُمْ مُّوَاقِعُوْهَا

وَلَمْ يَجِدُوْا عَنْهَا مَصْرِفًا

(ಅಲ್ ಕಹಫ್: 54)

ಅಂದರೆ: ಅಪರಾಧಿಗಳು ನರಗಾಗ್ನಿಯನ್ನು ದರ್ಶಿಸುವರು. ಆಗ ಅವರು ಅದರೊಳಗೆ ಬೀಳಲಿರುವುದಾಗಿ ಮನಗಾಣುವರು. ಅದರಿಂದ ತಪ್ಪಿಸಿಕೊಳ್ಳುವ ಯಾವ ದಾರಿಯನ್ನೂ ಅವರು ಕಾಣಲಾರರು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ ಅದರಿಂದ ಅನುಕೂಲವಾದುದನ್ನು ನೀವು ಪಠಿಸಿರಿ**

**(2419)** ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ನಾನು ಹಝ್ರತ್ ಹಿಶಾವ್ ಬಿನ್ ಹಕೀವ್ ಬಿನ್ ಹಿಝಾಮ್(ರ) ಅವರಿಗೆ ನಾನು ಪಠಿಸುವ ವಿಧಾನಕ್ಕಿಂತ ವಿಭಿನ್ನ ರೀತಿಯಲ್ಲಿ ಸೂರಾ ಫುರ್ಖಾನ್ ಅನ್ನು ಪಠಿಸುವುದನ್ನು ಆಲಿಸಿದೆ. ಮತ್ತು ಅದನ್ನು (ಸೂರಾ) ಹಝ್ರತ್ ಪೈಗಂಬರ್(ಸ) ರವರು ನನಗೆ ಪಠಿಸಿದ್ದರು. ಮತ್ತು ನಾನು ಅವರ ಮೇಲೆ ದಾಳಿ ಮಾಡಬಹುದಿತ್ತು, ಆದರೆ ನಾನು ಅವರಿಗೆ ನಮಾಝನ್ನು ಸಂಪೂರ್ಣವಾಗಿ ನಿರ್ವಹಿಸುವ ತನಕ ಬಿಡುವು ನೀಡಿದೆ. ತದನಂತರ, ನಾನು ಅವರು ಧರಿಸಿದ್ದ ಮೇಲಂಗಿಯನ್ನು ಹಿಡಿದು ಎಳೆದು ಹಝ್ರತ್ ಪೈಗಂಬರ್(ಸ) ಅವರ ಕರೆತಂದು ಹೇಳಿದೆ: ನಾನು (ಸೂರತ್ ಅಲ್–ಫುರ್ಕಾನ್) ಅನ್ನು ನೀವು(ಸ) ನನಗೆ ಕಲಿಸಿದ ವಿಧಾನಕ್ಕೆ ವಿರುದ್ಧವಾಗಿ ಅದನ್ನು ಬೇರೆ ರೀತಿಯಲ್ಲಿ ಪಠಿಸುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ನನಗೆ ಉದ್ದೇಶಿಸಿ ಹೇಳಿದರು: ಅವರನ್ನು ಬಿಟ್ಟುಬಿಡಿ. ನಂತರ ಅವರು(ಸ) ಅವರಿಗೆ ಹೇಳಿದರು: ಓದಿ. ಅದಕ್ಕೆ ಅವನು ಓದಿದನು. ಅವರು(ಸ) ಹೇಳಿದರು: ಅದೇ ರೀತಿ ಅವತೀರ್ಣಗೊಂಡಿದೆ. (ಆಗ ಅವರು ಹೇಳಿದರು:) ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ. ನಿಮಗೆ ಯಾವುದು ಸುಲಭವೋ ಹಾಗೆಯೇ ಪಠಿಸಿರಿ. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬ್ ಅಲ್–ಖುಸುಮತ್, 2008 ಖಾದಿಯಾನ್ ಪ್ರಕಟಿತ)**

ನಿಜವಾದ ಇಸ್ಲಾಂ ಧರ್ಮವು ತನ್ನ ಎಲ್ಲಾ ಶಕ್ತಿ ಮತ್ತು ಬಲವನ್ನು ತನ್ನ ಜೀವನದುದ್ದಕ್ಕೂ ಸರ್ವಶಕ್ತವಾದ ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುವುದಾಗಿದೆ. ಇದರಿಂದ ಒಬ್ಬನು ಉತ್ತಮ ಜೀವನವನ್ನು ಅನುವಂಶಿಕವಾಗಿ ಪಡೆಯುತ್ತಾನೆ.

ಮುಖ್ಯ ವಿಷಯವೇನೆಂದರೆ, ಲೌಕಿಕತೆ ತನ್ನ ಗುರಿಯಾಗಿಸಿಕೊಳ್ಳಬಾರದು, ಆದರೆ ನಿಜವಾದ ಗುರಿ ಧರ್ಮವಾಗಿರಬೇಕು. ಮತ್ತು ಲೌಕಿಕತೆಯನ್ನು ಧರ್ಮದ ಸೇವಕ ಎಂಬ ರೀತಿಯಲ್ಲಿ ಸಾಧಿಸಬೇಕು.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸರ್ವಶಕ್ತನದ ದೇವರ ದಾಸರು ಯಾರು?

ಇವರು ಅಲ್ಲಾಹನು ನೀಡಿದ ತನ್ನ ಜೀವನವನ್ನು ಅವನ ಮಾರ್ಗದಲ್ಲಿಯೆ ಸಮರ್ಪಿಸಿದವರಾಗಿದ್ದಾರೆ. ತನ್ನ ಪ್ರಾಣವನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡುವುದನ್ನು, ತನ್ನ ಸಂಪತ್ತು ಅವನ ಮಾರ್ಗದಲ್ಲಿ ಖರ್ಚು ಮಾಡುವುದನ್ನು ತನ್ನ ಸುಯೊಗ ಎಂದು ಭಾವಿಸುತ್ತಾರೆ. ಆದರೆ ಯಾರು ಲೌಕಿಕತೆಯನ್ನು ಮಾತ್ರ ತನ್ನ ಗುರಿಯಾಗಿಸಿಕೊಳ್ಳುತ್ತಾರೆ. ಅವರು ಧರ್ಮವನ್ನು ಸಂಶಯ ದೃಷ್ಟಿಯಿಂದ ಕಾಣುತ್ತಾರೆ. ಆದರೆ ಇದು ನಿಜವದ ಸತ್ಯವಿಶ್ವಾಸಿ ಹಾಗೂ ಸತ್ಯವಂತನ ಕಾರ್ಯವಲ್ಲ, ನಿಜವಾದ ಇಸ್ಲಾಂ ಧರ್ಮವು ತನ್ನ ಎಲ್ಲಾ ಶಕ್ತಿ ಮತ್ತು ಬಲವನ್ನು ತನ್ನ ಜೀವನದುದ್ದಕ್ಕೂ ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸುವುದಾಗಿದೆ. ಇದರಿಂದ ಒಬ್ಬನು ಉತ್ತಮ ಜೀವನವನ್ನು ಅನುವಂಶಿಕವಾಗಿ ಪಡೆಯುತ್ತಾನೆ. ಆದ್ದರಿಂದ ಸ್ವಯಂ ಅಲ್ಲಾಹನು ಈ ಪೈಕಿ ಹೇಳುತ್ತಾನೆ. **ಮನ್ ಅಸ್ಲಮ ವಜ್‌ಹಹೂ ಲಿಲ್ಲಾಹಿ ವ ಹುವ ಮುಹ್ಸಿನುನ್ ಫಲಹು ಅಜ್ರುಹೂ ಇಂದ ರಬ್ಬಿಹೀ ವಲಾ ಖೌಫುನ್ ಅಲೈಹಿಮ್ ವಲಾ ಹುಮ್ ಯಹ್‌ಝನೂನ್** (ಅಲ್‌ಬಖರ–113) ಎಂದರೆ ಯಾರು ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾಗಿ ಸತ್ಕರ್ಮಿಯಾಗಿರುತ್ತಾನೋ ಅವನಿಗೆ ತನ್ನ ಪ್ರಭುವಿನಿಂದ ಪ್ರತಿಫಲವಿದೆ. ಅಂತಹವರಿಗೆ ಭಯವಿಲ್ಲ, ಅವರು ದುಃಖಿತರೂ ಅಲ್ಲ. ಈ ಸ್ಥಳದಲ್ಲಿ ಇದರ ಅರ್ಥವೇನೆಂದರೆ ಒಂದು ವಿನೀತನೆ ಮತ್ತು ವಿನಮ್ರ ಭಾವದ ವಸ್ತ್ರವನ್ನು ಧರಿಸಿ ಅಲ್ಲಾಹನ ಆಶ್ರಯದಲ್ಲಿ ಬಿದ್ದು ತಮ್ಮ ಪ್ರಾಣ, ಸಂಪತ್ತು, ಖ್ಯಾತಿ ಮತ್ತು ತನ್ನಲ್ಲಿರುವುದೆಲ್ಲವನ್ನೂ ಅಲ್ಲಾಹನಿಗೆ ಅರ್ಪಿಸಿ ಜಗತ್ತನ್ನು ಮತ್ತು ಅದರ ಎಲ್ಲಾ ವಸ್ತುಗಳನ್ನು ಧರ್ಮದ ಸೇವಕರನ್ನಾಗಿ ಮಾಡಬೇಕು.

### ಲೌಕಿಕತೆಯನ್ನು ಸಾಧಿಸುವಲ್ಲಿ ಧರ್ಮವು ಗುರಿಯಾಗಬೇಕು

ಒಬ್ಬ ವ್ಯಕ್ತಿಗೆ ಪ್ರಪಂಚದೊಂದಿಗೆ ಆಸಕ್ತಿ ಅಥವಾ ಸಂಪರ್ಕವಿಲ್ಲ ಎಂದು ಯಾರೂ ಭಾವಿಸಬಾರದು. ನಾನು ಇದನ್ನು ಅರ್ಥೈಸುವುದಿಲ್ಲ, ಅಥವಾ ಸರ್ವಶಕ್ತನಾದ ಅಲ್ಲಾಹನು ಲೌಕಿಕ ಅನ್ವೇಷಣೆಗಳನ್ನು ನಿಷೇಧಿಸುವುದಿಲ್ಲ, ಬದಲಿಗೆ ಇಸ್ಲಾಂ ಧರ್ಮವು ಸನ್ಯಾಸತ್ವವನ್ನು ನಿಷೇಧಿಸಿದೆ. ಇದು ಹೇಡಿಗಳ ಕೆಲಸವಾಗಿದೆ. ಸತ್ಯವಿಶ್ವಾಸಿಯು ಎಷ್ಟು ಉತ್ತಮ ರೀತಿಯಲ್ಲಿ ಲೌಕಿಕ ಸಂಬಂಧವನ್ನು ನಿಭಾಯಿಸುತ್ತಾನೆ ಅಷ್ಟೇ ಉನ್ನತಿಗೆ ಕಾರಣವಾಗುತ್ತಾನೆ. ಏಕೆಂದರೆ ಅವನ ಗುರಿ ಧರ್ಮವಾಗಿರುತ್ತದೆ ಮತ್ತು ಲೌಕಿಕತೆ, ಅವನ ಸಂಪತ್ತು, ಗೌರವ ಎಲ್ಲವು ಧರ್ಮದ ಸೇವಕನಗಿರುತ್ತಾದೆ. ಆದ್ದರಿಂದ ವಾಸ್ತವವೇನೆಂದರೆ ಲೌಕಿಕತೆಯೇ ಗುರಿಯಾಗಿರಬಾರದು. ಬದಲಿಗೆ ಲೋಕ ಸಾಧನೆಯು ಸಹ ಧರ್ಮಕ್ಕೆ ಅಧೀನವಾಗಿರಬೇಕು ಮತ್ತು ಜಗತ್ತನ್ನು ಧರ್ಮದ ಸೇವಕ ಎಂಬ ರೀತಿಯಲ್ಲಿ ಸಾಧಿಸಬೇಕು. ಉದಾಹರಣೆಗೆ ಒಬ್ಬ ವ್ಯಕ್ತಿಯು ಒಂದು ಸ್ಥಳದಿಂದ ಇನ್ನೊಂದಕ್ಕೆ ಹೋಗಲು ಸವಾರಿ ಮತ್ತು ದಾರಿವೆಚ್ಚ ಮಾಡುವಂತೆಯೇ, ಅವನ ಮುಖ್ಯ ಉದ್ದೇಶವು ಗಮ್ಯಸ್ಥಾನವನ್ನು ತಲುಪುವುದಾಗಿರುತ್ತದೆ. ಸವಾರಿ ಮತ್ತು ರಸ್ತೆಯ ಅಗತ್ಯತೆಗಳಲ್ಲ. ಈ ನಿಟ್ಟಿನಲ್ಲಿ, ಮನುಷ್ಯನು ಲೌಕಿಕತೆಯನ್ನು ಸಾಧಿಸಬೇಕು, ಆದರೆ ಅದನ್ನು ಧರ್ಮದ ಸೇವಕ ಎಂದು ಪರಿಗಣಿಸಬೇಕು.

**(ಮಲ್ಫೂಝಾತ್, ಸಂಪುಟ–1, ಪುಟ–494 ಮುದ್ರಣ 2018 ಖಾದಿಯಾನ್)**

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್
ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))................(9)

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಎಂಟು ಸಂಚಿಕೆಗಳಿಂದ, ನಾವು ಅಹ್ಮದೀಯ ಜಮಾಅತ್‌ನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. ಮುನ್ಸಿಫ್ ನ ಆಕ್ಷೇಪಣೆಗಳಲ್ಲಿ ಒಂದು ಹೀಗಿದೆ:

"ಮಿರ್ಝಾ ಗುಲಾವ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸಬೇಕು ಎಂದು ಭಾವಿಸುತ್ತಾರೆ."

ಹಿಂದಿನ ಮೂರು ಸಂಚಿಕೆಗಳಲ್ಲಿ ನಾವು ಮುಜದ್ದಿದಿಯತ್ (ಧರ್ಮ ಸುಧಾರಕ), ಮುಹದಸ್ಸಿಯತ್, ಮಹದಿವಿತ್, ಸಾದೃಶ್ಯ ಮಸೀಹ್, ಮಸೀಹಿಯತ್ ಮತ್ತು ನಿಜವಾದ ನಬಿಯ ಉತ್ತರಗಳನ್ನು ನೀಡಿರುತ್ತೇವೆ.

ಇಂದು ನಾವು ಝಿಲ್ಲಿ ಮುಹಮ್ಮದ್ (ಮುಹಮ್ಮದರ ಸಾದೃಶ್ಯ ರೂಪ) ಆಕ್ಷೇಪ ಕುರಿತು ಉತ್ತರ ನೀಡುವೆವು.

ಮುಹಮ್ಮದ(ಸ)ರ ಸಾದೃಶ್ಯ ರೂಪ ಎನ್ನುವುದರಲ್ಲಿ 'ಮುನ್ಸಿಫ್' ಪತ್ರಿಕೆ ಹೈದರಾಬಾದಿನ ಸಂಪಾದಕರಿಗೆ ಯಾವ ಆಕ್ಷೇಪಣೆ ಇದೆ? ಆಕ್ಷೇಪಣೆ ಏಕೆ ಇದೆ? ಇದರಲ್ಲಿ ಶರಿಅತ್ತಿಗೆ ವಿರೋಧವಾದ ಯಾವ ಮಾತಿದೆ? ಸಂಪಾದಕರು ಈ ಕುರಿತು ಏನೂ ಹೇಳಿಲ್ಲ. ಹಝ್ರತ್ ವಾಗ್ದತ್ತ ಮಸೀಹರು (ಅ) ನಿಸ್ಸಂಶಯವಾಗಿಯೂ ಸಾದೃಶ್ಯ ರೂಪದ ಮುಹಮ್ಮದ್ (ಝಿಲ್ಲಿ ಮುಹಮ್ಮದ್) ಎಂಬ ದಾವೆ ಮಾಡಿರುವುದು ನಿಜ. ಆದರೆ ಈ ದಾವೆಯಲ್ಲಿ ಯಾವ ಕೆಡುಕಿದೆ ತೋರಿಸಬೇಕಲ್ಲವೆ. ಸಂಪಾದಕರು ಇಂತಹ ಅಪವಾದ ಎಲ್ಲೋ ಒಂದು ಕಡೆ ನೋಡಿದ್ದನ್ನು ನಕಲು ಮಾಡಿದ್ದಾರೆ ಎನಿಸುತ್ತದೆ. ಇದರಲ್ಲಿ ಅವರ ಸ್ವಂತ ಅಭಿಪ್ರಾಯವೇನಿಲ್ಲ.

"ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಸಂಪದಕರ ದೃಷ್ಟಿಯಲ್ಲಿ ಪ್ರವಾದಿವರ್ಯರ ಸಾದೃಶ್ಯ ರೂಪ ಧಾರಣೆ ಮಾಡುವುದು ಪಾಪವೇ? ಅಥವಾ ಶರಿಅತ್ ವಿರೋಧಿ ಕಾರ್ಯವೇ? ಅಥವಾ ಅದರಲ್ಲಿ ಪ್ರವಾದಿ(ಸ) ರವರ ಗೌರವಕ್ಕೆ ಧಕ್ಕೆ ಬರುವುದೇ? ಸಂಪಾದಕರಾದವರಿಗೆ ಏನಾದರೂ ತಿಳಿಸಬಹುದಿತ್ತಲ್ಲ, ತಿಳಿದಿರಲಿ, ಪ್ರವಾದಿ(ಸ) ರವರ ಆಧ್ಯಾತ್ಮಿಕ ಅನುಗ್ರಹ ವೃದ್ಧಿಯ ಪರಿಣಾಮವಾಗಿ, ಯಾರಾದರೂ ಅವರ ಸಾದೃಶ್ಯರಾದರೆ ಅದರಲ್ಲಿ ಪ್ರವಾದಿ(ಸ) ರವರ ಸ್ಥಾನವೇ ಉನ್ನತವಾಗಿರುತ್ತದೆ. ಅದು ಅವರ ಉನ್ನತ ಆಧ್ಯಾತ್ಮಿಕ ಶಕ್ತಿಗೆ ಪುರಾವೆಯಾಗಿದೆ. ಅದರಿಂದ ಅವರ ಸ್ಥಾನಕ್ಕೆ ಚ್ಯುತಿ ಬರುವುದಿಲ್ಲ, ಬದಲು ಹೆಚ್ಚಾಗುತ್ತದೆ. ನಮ್ಮ ಪೂರ್ವ ಮಹಾತ್ಮರುಗಳು ಬರೆದಿದ್ದಾರೆ. ಮುಹಮ್ಮದಿಯ ಸಮುದಯದಿಂದ ಬರುವ ಮಹದಿಯುದ್ದು ಮಹೋನ್ನತ ಸ್ಥಾನವಾಗಿರುವುದು, ಅವರು ಪ್ರವಾದಿ(ಸ) ರವರ ಸಾದೃಶ್ಯ ರೂಪವಾಗಿರುವರು. ಅವರ ಅಂತರಂಗ(ಬಾತಿನ್) ಪ್ರವಾದಿ(ಸ) ರವರ ಅಂತರಂಗವಾಗಿರುವುದು. ಪ್ರವಾದಿ(ಸ) ರವರ ಪ್ರಕಾಶಗಳ ಪ್ರತಿಬಿಂಬಿತ ವ್ಯಕ್ತಿವಾಗಿರುವವರು ಎಂದರೆ ಅವರು ಪ್ರವಾದಿ(ಸ) ರವರ ಸಾದೃಶ್ಯರೂಪವಾಗಿರುವರು.

ಮಹಾತ್ಮರುಗಳ ಮಹಾಥ್ಮರು ಹಝ್ರತ್ ಮುಹಿಯುದ್ದೀನ್ ಇಬ್ನು ಅರಬಿ (ರಹ) ಹೇಳುತ್ತಾರೆ.

اَلْمَهْدِیُّ الَّذِیْ یَجِیْءُ فِیْ اٰخِرِ الزَّمَانِ فَاِنَّہٗ یَکُوْنُ فِی الْاَحْکَامِ الشَّرْعِیَّۃِ تَابِعًا لِمُحَمَّدٍ ﷺ وَفِی الْمَعَارِفِ وَالْعُلُوْمِ وَ الْحَقِیْقَۃِ تَکُوْنُ جَمِیْعُ الْاَنْبِیَآءِ تَابِعِیْنَ لَہٗ کُلُّھُمْ لِاَنَّ بَاطِنَہٗ بَاطِنُ مُحَمَّدٍ ﷺ (شرح فصوص الحکم مطبعۃ الزاہر مصریہ صفحہ 52،51)

ಅನುವಾದ: ಅಂತಿಮ ರೂಪದಲ್ಲಿ ಆಗಮಿಸಲಿರುವ ಇಮಾಮ್ ಮಹದಿಯರು ನಿಶ್ಚಿತವಾಗಿಯೂ ಶರೀಅತ್ ಆದೇಶಗಳ ಮೇರೆಗೆ ಪ್ರವಾದಿ (ಸ) ರವರ ಅನುಯಾಯಿಗಳಾಗಿರುವರು ಮತ್ತು ಜ್ಞಾನ ಆಧ್ಯಾತ್ಮಿಕ ಜ್ಞಾನ ಹಾಗೂ ವಾಸ್ತವವಾಗಿ ಎಲ್ಲಾ ಪ್ರವಾದಿಗಳು ಮಹದಿಯನ್ನು ಅನುಸರಿಸುವರು. ಏಕೆಂದರೆ ಅವರ ಅಂತರಂಗ ಪ್ರವಾದಿ (ಸ) ರವರ ಅಂತರಂಗವಾಗಿರುವುದು. (ಶರಹ ಫಸೂಸುಲ್ ಹಕಮ್ ಮತ್ಬತುರ್ಝ್ಝಾಹಿರ್, ಮಿಸ್ರಿಯಾ ಪುಟ–51,52)

ಹಝ್ರತ್ ಇಮಾಮ್ ಬಾಖಿರ್(ರಹ) ಹೇಳುತ್ತಾರೆ:

"یَقُوْلُ الْمَھْدِیُّ یَا مَعْشَرَ الْخَلَا ئِقِ ...اَلَا وَمَنْ اَرَادَاَنْ یَنْظُرَ اِلٰی اِبْرَاھِیْمَ وَاِسْمٰعِیْلَ فَھَا اَنَا ذَا اِبْرَاھِیْمُ وَاِسْمٰعِیْلُ اَلَا وَمَنْ اَرَادَ اَنْ یَّنْظُرَ اِلٰی مُوْسٰی یُوْشَعُ فَھَا اَنَاذَا مُوْسٰی وَیُوْشَعُ اَلَا وَمَنْ اَرَادَاَنْ یَّنْظُرَ اِلٰی مُحَمَّدٍ وَ اَمِیْرِ الْمُؤْمِنِیْنَ فَھَا اَنَا ذَا مُحَمَّدٌ صَلَّی اللّٰہُ عَلَیْہِ وَسَلَّمَ وَاَمِیْرُ الْمُؤْمِنِیْنَ۔" (بحارالانوار جلد 13 صفحہ 202)

ಅನುವಾದ: ಎಂದರೆ ಇವಾಮ್ ಮಹದಿಯರು ಹೇಳುವರು, ಓ ಜನರೇ! ನಿಮ್ಮ ಪೈಕಿ ಯಾರಾದರೂ ಇಬ್ರಾಹಿಂ, ಇಸ್ಮಾಯಿಲ್ ರವರನ್ನು ನೊಡಬಯಸುವವರಿದ್ದರೆ ಆಲಿಸಿರಿ! ನಾನೇ ಇಬ್ರಾಹಿಂ ಇಸ್ಮಾಯಿಲ್ ಆಗಿರುತ್ತೇನೆ. ನಿಮ್ಮ ಪೈಕಿ ಯಾರಾದರೂ ಮೂಸಾ, ಯಾಶ(ಅ) ಅವರನ್ನು ನೋಡಬಯಸುವವರಿದ್ದರೆ, ಕೇಳಿರಿ, ನಾನೇ ಆ ಮೂಸಾ ಮತ್ತು ಯಾಶ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಈಸಾ ಮತ್ತು ಶಮಊನ್‌ರವನ್ನು ನೋಡಬಯಸುವವರಿದ್ದರೆ, ಆಲಿಸಿರಿ, ಆ ಈಸಾ ಮತ್ತು ಶಮಊನ್ ನಾನಾಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಹಝ್ರತ್ ಮುಹಮ್ಮದ್(ಸ) ಮತ್ತು ಅಮೀರುಲ್ ಮುಮಿನೀನ್ ಹಝ್ರತ್ ಅಲಿ(ರ) ಅವರುಗಳನ್ನು ನೋಡಬಯಸುವವರಿದ್ದರೆ, ಆಲಿಸಿರಿ, ಮುಹಮ್ಮದ್(ಸ) ಮತ್ತು ಅಮೀರುಲ್ ಮುಮಿನೀನ್ ನಾನೇ ಆಗಿದ್ದೇನೆ."

ಇನ್ನು ಮುನ್ಸಿಫ್ ಹೈದರಾಬಾದ್ ಪತ್ರಿಕೆಯ ಸಂಪಾದಕರಿಗೆ ಇವಾಮ್ ಬಾಖಿರ್ (ರಹ) ರವರ ಸ್ಥಾನವಾನಗಳ ಕುರಿತು ತಿಳಿಸಿಕೊಡುವುದು ಅನಿವಾರ್ಯವೆನಿಸುತ್ತದೆ ಅವರ ಹೆಸರು ಮುಹಮ್ಮದ್, ಪದನಾಮ ಅಬು ಜಾಫರ್ ಮತ್ತು ಉಪನಾಮ ಬಾಖಿರ್ ಎಂದಿತ್ತು. ಅವರು (ರಹ) ಇವಾವ್ ಝೈನುಲ್ ಆಬಿದೀನ್‌ರವರ ಹಿರಿಯ ಸುಪುತ್ರರಾಗಿದ್ದರು. ಹಝ್ರತ್ ಇಮಾಮ್ ಹುಸೇನ್(ರ) ರವರ ಮೊಮ್ಮಗ ಮತ್ತು ದೇವನ ಹುಲಿ ಹಝ್ರತ್ ಅಲಿ(ರ) ಮತ್ತು ಸ್ವರ್ಗದಲ್ಲಿರುವ ವುಹಿಳೆಯರ ಸರದಾರ ಹಝ್ರತ್ ಫಾತಿಮಾ(ರ) ರವರ ಮರಿಮಕ್ಕಳಾಗಿದ್ದರು. ಅವರ(ರ) ತಾಯಿ ಪ್ರವಾದಿ(ಸ) ರವರ ಮೊಮ್ಮಗ ಎಂದರೆ ಹಝ್ರತ್ ಅಲಿ ಫಾತಿಮಾರ ಹಿರಿಯ ಪುತ್ರ ಇಮಾಮ್ ಹಸನ್‌ರ ಪುತ್ರಿಯಾಗಿದ್ದರು. ಅವರು ತನ್ನ ಜ್ಞಾನ ಆಧ್ಯಾತ್ಮಿಕ ಅನುಗ್ರಹ ಕಾರಣಗಳಿಂದ ಬಾಖಿರ್ ಎಂಬ ಬಿರುದಿನಿಂದ ಪ್ರಸಿದ್ಧರಾದರು. ಅಂದಹಾಗೆ ಇಮಾಮ್ ಬಾಖಿರ್(ರಹ) ರವರು ಸಾಮಾನ್ಯ ಮನುಷ್ಯರಾಗಿರಲಿಲ್ಲ ಬದಲಿಗೆ ಅವರ ತಂದೆ ಹಾಗೂ ತಾಯಿಯ ವಂಶ ಪ್ರವಾದಿ(ಸ) ರವರ ವಂಶಕ್ಕೆ ಸೇರಿದ್ದಾಗಿತ್ತು.

ಈಗ ಮುನ್ಸಿಫ್ ಪತ್ರಿಕೆಯ ಸಂಪಾದಕರೆ ಹೇಳಬೇಕು. ಇಮಾಮ್ ಮಹದಿ ಅವರ ಹೇಳಿಕೆ–ಯಾರಾರು ಮುಹಮ್ಮದ್(ಸ) ರವರನ್ನು ನೋಡಬಯಸುವರೋ ಅವರು ನನ್ನನ್ನು ನೋಡಿಕೊಳ್ಳಲಿ ಎಂಬ ಮಾತು ಸ್ವತಃ ಮುಹಮ್ಮದರನ್ನೇ ಹೇಳಿದಂತಾಯಿತೇ ಅಥವಾ ಮುಹಮ್ಮದರ ಸಾದೃಶ್ಯ ರೂಪ? ಸ್ವಂತ ವ್ಯಕ್ತಿ ಅಂತೂ ಆಗಲಾರರು. ನಿಶ್ಚಿತವಾಗಿಯೂ ಸಾದೃಶ್ಯರೇ ಆಗುತ್ತಾರೆ. ಅಂದಹಾಗೆ ಮುಹಮ್ಮದರ ಸಾದೃಶ್ಯ ರೂಪದ ನಿಮ್ಮ ಆಕ್ಷೇಪಣೆಯನ್ನು ಈ ಮೂಲಕ ನಾವು ತಿಳಿಸಿ ಹೇಳಿದಂತಾಯಿತು.

ಕೆಲವು ಇನ್ನಷ್ಟು ಉದಾಹರಣೆಗಳಿವೆ. ಅದನ್ನು ನಾವು ನಿಮ್ಮ ಸೇವೆಯಲ್ಲಿ ಪ್ರಸ್ತುತಪಡಿಸುತ್ತೇವೆ. ಗಮನಿಸಿರಿ:

ದೇವಜ್ಞಾನಿ, ದೇವಪ್ರಿಯರು ಸಯ್ಯದ್ ಅಬ್ದುಲ್ ಕರೀವ್ ಜೀಲಾನಿ(ರಹ್) (767ಹಿ–837ಹಿ) ಹೇಳುತ್ತಾರೆ:

ಈ (ಇನಾಮ್ ಮಹದಿ) ಎಂದರೆ ತಾತ್ಪರ್ಯ ಮುಹಮ್ಮದಿ ಸ್ಥಾನಮಾನಕ್ಕೆ ಅರ್ಹ ವ್ಯಕ್ತಿಯಾಗಿದ್ದಾನೆ ಮತ್ತು ಅವನ ಎಲ್ಲ ಸಾಧನೆಗಳು ಸಮಾನ ಸ್ಥಾನ ಹೊಂದಿರುತ್ತವೆ. (ಇನ್ಸಾನ್ ಕಾಮಿಲ್ ಉರ್ದು ಅಧ್ಯಾಯ 61, ಮಹದಿಯ ವಿವರಣೆ, ಪುಟ–375, ನಫೀಸ್ ಅಕಾಡಮಿ ಕರಾಚಿ)

ಹಝ್ರತ್ ಮುಲ್ಲ ಅಬ್ದುರ್ ರಹ್ಮಾನ್ ಜಾಮಿ (817 ಹಿ–898 ಹಿ)ಹೇಳುತ್ತಾರೆ:

"ಹಝ್ರತ್ ರಸೂಲುಲ್ಲಾಹ್(ಸ) ರವರ ಪವಿತ್ರ ಅಂತರಂಗವೇ ಮುಹಮ್ಮದರ ವಂಶಿಯ ಅನುಗ್ರಹದ ವೈಶಿಷ್ಟ್ಯವಾಗಿದೆ ಮತ್ತು ಅದುವೇ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಯಾವ ಘಟನೆಗಳ ಬಗ್ಗೆ ಭವಿಷ್ಯ ನುಡಿದಿದ್ದರೋ ಅವುಗಳಲ್ಲಿ ಸುವ್ಯಕ್ತವಾದ ಮತ್ತು ಮಹತ್ತಾದ ಒಂದು ರೋಮ್ ವಿಜಯದ ಭವಿಷ್ಯವಾಣಿಯಾಗಿತ್ತು.

ರೋಮನ್ ಸಾಮ್ರಾಜ್ಯದ ವಿಜಯದ ಕುರಿತು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು ಮತ್ತು ಇದರ ಸಂಬಂಧ ಬದ್ರ್ ಯುದ್ಧದೊಂದಿಗೂ ಇದೆ.

ಈ ಆಯತ್ ಅವತರಿಸಿದಾಗ, ಇದು ಮಕ್ಕಾದ ವಿಷಯವಾಗಿತ್ತು, ಮಕ್ಕಾದ ಅವಿಶ್ವಾಸಿಗಳು ಪರ್ಷಿಯಾದ ಜನರು ರೋಮ್ ಜನರ ಮೇಲೆ ಮೇಲುಗೈ ಸಾಧಿಸಬೇಕೆಂದು ಬಯಸಿದ್ದರು ಏಕೆಂದರೆ ಇವರು ಮತ್ತು ಅವರು ವಿಗ್ರಹಾರಾಧಕರಾಗಿದ್ದರು. ಪರ್ಷಿಯನ್ನರು ಮತ್ತು ಇರಾನಿಯನ್ನರು ವಿಗ್ರಹಾರಾಧಕರಾಗಿದ್ದರು, ಅಗ್ನಿ ಆರಾಧಕರಾಗಿದ್ದರು ಮತ್ತು ಮಕ್ಕಾದ ಜನರು ಸಹ ವಿಗ್ರಹಾರಾಧಕರೂ ಆಗಿದ್ದರು. ಪರ್ಷಿಯನ್ನರು ಮೇಲುಗೈ ಸಾಧಿಸಬೇಕೆಂದು ಅವರು ಬಯಸಿದ್ದರು ಮತ್ತು ಮುಸ್ಲಿಮರು, ರೋಮನ್ನರು ಪರ್ಷಿಯನ್ನರ ಮೇಲೆ ಮೇಲುಗೈ ಸಾಧಿಸಲು ಇಷ್ಟಪಡುತ್ತಿದ್ದರು ಏಕೆಂದರೆ ಅವರು ಗ್ರಂಥಾನುಸಾರಿಗಳಾಗಿದ್ದರು.

ಅರೇಬಿಯಾದ ಉಮ್ಮೀ ಪ್ರವಾದಿಯ ಭವಿಷ್ಯವಾಣಿಯು ಅಕ್ಷರಶಃ ಮತ್ತು ನಿಖರವಾದ ಸಮಯದಲ್ಲಿ ನೆರವೇರಿತು. ಮುಸಲ್ಮಾನರು ಬದ್ರ್ ಮೇಲೆ ದಾಳಿ ಮಾಡಿದಾಗ ರೋಮನ್ನರು ಖುರೈಷರನ್ನು ಈ ಕ್ಷೇತ್ರದಲ್ಲಿ ಸೋಲಿಸಿದರು ಮತ್ತು ಇರಾನಿಯನ್ನರ ಮೇಲೆ ಪ್ರಾಬಲ್ಯ ಸಾಧಿಸಿದರು. ಅವರು ಪೂರ್ವದ ವಿಜಯಗಳ ನಂತರ ಒಂದರ ನಂತರ ಒಂದು ನಗರವನ್ನು ಹಿಂತೆಗೆದುಕೊಂಡರು ಮತ್ತು ಇರಾನಿಯನ್ನರನ್ನು ಬಾಸ್ಫರಸ್ ಮತ್ತು ನೈಲ್ ದಡದಿಂದ ದೂರ ತಳ್ಳಿದರು, ನಂತರ ಟೈಗ್ರಿಸ್ ಮತ್ತು ಯೂಫ್ರಟಿಸ್ ತೀರಕ್ಕೆ ತಳ್ಳಿದರು.

ಇಸ್ಲಾಂ ಸತ್ಯಧರ್ಮವೆಂದೂ ಹಝ್ರತ್ ಪೈಗಂಬರ್(ಸ) ಸತ್ಯಪ್ರವಾದಿಯೆಂದೂ ಹೇಗೆ ತಿಳಿಯುವುದು ಎಂದು ಕೇಳುತ್ತಾರೆ. ಇಲ್ಲಿಯ ವಾತಾವರಣ ಅವರ ಮೇಲೆ ಇಂತಹ ಪ್ರಭಾವ ಬೀರಲು ಆರಂಭಿಸಿದೆ. ಅವರಿಗೆ ಇಸ್ಲಾಮಿನ ಸತ್ಯತೆಯ ಬಗ್ಗೆ ಸಂಶಯ ಉಂಟಾಗಲು ಆರಂಭವಾಗಿದೆ. ಅವರು ಅನ್ಯರ ಅನಿಸಿಕೆಗಳನ್ನು ಮತ್ತು ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳನ್ನು ನೋಡಬೇಕಾಗಿದೆ. ಈ ಭವಿಷ್ಯವಾಣಿಗಳು ಹೇಗೆ ಇಸ್ಲಾಮಿನ ಸತ್ಯತೆಯನ್ನು ಸಾಬೀತುಗೊಳಿಸುತ್ತಿದೆ ಎಂದು ಹೆತ್ತವರು ಸ್ವತಃ ಓದಬೇಕು ಮತ್ತು ಮಕ್ಕಳಿಗೂ ತೋರಿಸಬೇಕು. ಹೆತ್ತವರು ಮತ್ತು ಯುವಕರು ತಮ್ಮ ಅರಿವನ್ನು ವರ್ಧಿಸಬೇಕು. ಪ್ರಶ್ನೆಗಳನ್ನು ಮಾತ್ರ ಕೇಳುವುದು ಸಾಕಾಗುವುದಿಲ್ಲ. ಪ್ರಶ್ನೆಗಳನ್ನು ಕೇಳಲಿದ್ದರೆ ಸ್ವತಃ ಕೂಡ ಅರಿವನ್ನು ಗಳಿಸಬೇಕು. ನಮ್ಮ ಸಂಘಟನೆಗಳು ಕೂಡ ಈ ಕುರಿತು ಜನರಿಗೆ ಅರಿವು ನೀಡಬೇಕು.

ಈ ಭವಿಷ್ಯವಾಣಿಯ ಶ್ರೇಷ್ಠತೆ ಏನೆಂದರೆ, ಸೋಲಿನ ಆರಂಭದಿಂದ ವಿಜಯದ ಆರಂಭದ ತನಕದ ವರ್ಷಗಳನ್ನು ಜೋಡಿಸಿದರೆ ಒಂಬತ್ತು ವರ್ಷಗಳಾಗುತ್ತವೆ. ಸೋಲಿನ ಕೊನೆಯಿಂದ ವಿಜಯದ ಕೊನೆಯ ವರೆಗೆ ಇರುವ ವರ್ಷಗಳನ್ನು ಜೋಡಿಸಿದರೆ ಅದು ಕೂಡ ಒಂಬತ್ತು ವರ್ಷಗಳಾಗುತ್ತವೆ.

"ಯೋಚಿಸಿ ನೋಡಿರಿ, ಇದು ಎಷ್ಟು ಅದ್ಭುತಕರ ಮತ್ತು ಮಹತ್ತಾದ ಭವಿಷ್ಯವಾಣಿಯಾಗಿದೆ. ಮುಸ್ಲಿಮರ ದುರ್ಬಲ ಮತ್ತು ಬಲಹೀನ ಸ್ಥಿತಿ ಸ್ವತಃ ಅಪಾಯದಲ್ಲಿದ್ದ ಸಮಯದಲ್ಲಿ ಈ ಭವಿಷ್ಯವಾಣಿಯನ್ನು ನುಡಿಯಲಾಗಿತ್ತು. ಯಾವುದೇ ಸಾಮಾನು ಮತ್ತು ಶಕ್ತಿ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ವಿರೋಧಿಗಳು ಹೀಗೆ ಹೇಳುತ್ತಿದ್ದರು: ಈ ಸಂಘ ಬೇಗನೇ ನಾಶವಾಗುವುದು. ಕಾಲಾವಧಿಯನ್ನು ಕೂಡ ನಿರ್ಣಯಿಸಲಾಯಿತು. ಅನಂತರ ಆ ದಿನದಂದು ಸತ್ಯವಿಶ್ವಾಸಿಗಳು ಸಂತೋಷಗೊಳ್ಳುವರು ಎಂದು ಹೇಳಿಕೊಂಡು ಎರಡು ಭವಿಷ್ಯವಾಣಿಗಳನ್ನು ಮಾಡಲಾಯಿತು. ಎಂದರೆ, ಆ ದಿನದಂದು ರೋಮನರು ಇರಾನಿಯರ ಮೇಲೆ ವಿಜಯ ಸಾಧಿಸುವರು ಮತ್ತು ಅದೇ ದಿನದಂದು ಮುಸ್ಲಿಮರು ಕೂಡ ಯಶಸ್ಸು ಗಳಿಸಿ ಸಂತೋಷಗೊಳ್ಳುವರು ಎಂದು ನುಡಿಯಲಾಯಿತು. ಹೀಗೆ ಭವಿಷ್ಯ ನುಡಿಯಲಾದಂತೆ ಬದ್ರ್ ದಿನದಂದು ಈ ಭವಿಷ್ಯವಾಣಿ ಈಡೇರಿತು. ಒಂದೆಡೆ ರೋಮನರು ಜಯ ಗಳಿಸಿದರು ಮತ್ತೊಂದೆಡೆ ಮುಸ್ಲಿಮರು ವಿಜಯಿಯಾದರು." (ಹಝ್ರತ್ ಮಸೀಹ್ ಮೌಊದ್[ಅ])

**ಬದರ್ ಯುದ್ಧ ಹಾಗೂ ರೋಮ್ ವಿಜಯದ ಬವಿಷ್ಯವಾಣಿಯ ಪರಸ್ಪರ ಸಂಬಂಧ ಹಾಗೂ ಸೂರಃ ರೂಮ್‌ನಲ್ಲಿ ವಿವರಿಸಲಾದ ಮಹಾನ್ ಭವಿಷ್ಯವಾಣಿಯ ಕುರಿತು ವಿಶ್ವಾಸವರ್ಧಕ ವಿವರಾತ್ಮಕ ಪ್ರಸ್ತಾವನೆ**

ಮಾನ್ಯ ಫಿರಾಸ್ ಅಲೀ ಅಬ್ದುಲ್ ವಾಹಿದ್ ಸಾಇಬ್ (ಯುಕೆ) ರವರ ನಿಧನದ ಕುರಿತು ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ವಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **22-09-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕೆಲವು ವಾರಗಳ ಹಿಂದೆ ಬದ್ರ್ ಯುದ್ಧಕ್ಕೆ ಸಂಬಂಧಪಟ್ಟು ಹಝ್ರತ್ ಪೈಗಂಬರ್(ಸ)ರ ಘಟನೆಗಳನ್ನು ವಿವರಿಸಿದ್ದೆ. ಇಂದು ಬದ್ರಿಗೆ ಸಂಬಂಧಪಟ್ಟು ಕೊಂಡೇ ಚರಿತ್ರೆಯಲ್ಲಿರುವ ಮತ್ತು ತಿಳಿಯಲೇ ಬೇಕಾದ ಕೆಲವು ಘಟನೆಗಳನ್ನು ಮುಂದಿರಿಸುತ್ತೇನೆ. ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪಿಸಲಾದಂತೆ ಹಝ್ರತ್ ಪೈಗಂಬರ್(ಸ) ಮೂರು ದಿನಗಳ ತನಕ ಬದ್ರ್ ಮೈದಾನದಲ್ಲಿ ತಂಗಿದರು.

ಮತ್ತು ಮೂರನೇ ದಿನ ಸವಾರಿ ಮೃಗಗಳ ಜೀನುಗಳನ್ನು ಬಿಗಿಗೊಳಿಸಲು ನಿರ್ದೇಶನ ನೀಡಿದರು. ಬದ್ರ್ ಮೈದಾನದಲ್ಲಿ ಇದ್ದುಕೊಂಡೇ ಹಝ್ರತ್ ಪೈಗಂಬರ್(ಸ) ವಿಜಯದ ಸುವಾರ್ತೆಯನ್ನು ಮುಟ್ಟಿಸಲು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ)ರನ್ನು ಮದೀನದ ಕಡೆಗೆ ಕಳುಹಿಸಿದರು. ಅನಂತರ

ಹಝ್ರ‍ತ್ ಪೈಗಂಬರ್(ಸ) ಮದೀನದ ಕಡೆಗೆ ಮರಳಲು ಯಾತ್ರೆ ಆರಂಭಿಸಿದರು. ಈ ವಿಜಯಶಾಲಿ ಸಂಘದಲ್ಲಿ ಮಕ್ಕದ ಖುರೈಶಿಯರ ಎಪ್ಪತ್ತು ಕೈದಿಗಳು ಸಹ ಇದ್ದುವು. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–420, 425, 426, ಬಾಬ್ ಗ್ಝ್ವ ಬದರ್ ಅಲ್‌ಕುಬ್ರ, ದಾರುಲ್ ಮಾರಿಫ ಬೈರೂತ್) (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಮಗ್ಝಿ, ಹದೀಸ್–3986)

ಅವರಲ್ಲಿ ಇಬ್ಬರು ಕೈದಿಗಳಾದ ನಝ್ರ್ ಬಿನ್ ಹಾರಿಸ್ ಮತ್ತು ಉಖ್ಬ ಬಿನ್ ಅಬೀ ಮುಈತ್‌ರನ್ನು ಯುದ್ಧ ಅಪರಾಧಗಳ ಕಾರಣದಿಂದ ಮಾರ್ಗದಲ್ಲೇ ವಧಿಸಲಾಯಿತು ಎಂದು ಚರಿತ್ರೆಯ ಗ್ರಂಥಗಳಲ್ಲಿ ಬರೆಯಲಾಗಿದೆ. ಆದರೆ ಇದರ ಬಗ್ಗೆ ಎಲ್ಲ ಚರಿತ್ರೆಗಾರರು ಒಮ್ಮತಾಭಿಪ್ರಾಯವನ್ನು ಹೊಂದಿಲ್ಲ.

ಅಲ್ಲಾಮ ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರ‍ತ್ ಪೈಗಂಬರ್(ಸ) ಸಫ್‌ರ ಎಂಬ ಸ್ಥಳಕ್ಕೆ ತಲುಪಿದಾಗ ನಝ್ರ್ ಬಿನ್ ಹಾರಿಸ್‌ನನ್ನು ಹಝ್ರ‍ತ್ ಅಲಿ(ರ) ವಧಿಸಿದರು.
(ಅಸ್ಸೀರತುಲ್ ಹಲಬೀಯ ಲಿಇಬ್ನೆ ಹಿಶಾಮ್, ಪುಟ–438, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಅಸ್ಸೀರತುಲ್ ಹಲಬೀಯಾದಲ್ಲಿ ನಝ್ರ್ ಸೆರೆಯಾಳಿನ ಪರಿಸ್ಥಿತಿಯಲ್ಲಿದ್ದ ಆತನು ತನ್ನ ಸಹಚರನಿಗೆ ಹೇಳಿದನು: ಅಲ್ಲಾಹನ ಆಣೆ! ಮುಹಮ್ಮದ್(ಸ) ನನ್ನನ್ನು ವಧಿಸಲು ಹೊರಟಿದ್ದಾರೆ ಏಕೆಂದರೆ ಅವರು ನನ್ನನ್ನು ಕಂಡ ರೀತಿಯಲ್ಲಿ ಸಾವು ಕಾಣಿಸಿಕೊಂಡಿತು. ಈ ವ್ಯಕ್ತಿಯು ನಝ್ರ್‌ನಿಗೆ ಹೇಳಿದನು, ಅಲ್ಲಾಹನ ಆಣೆ! ಇದು ಅವರ ಶೀವಿಯ ಕಾರಣದಿಂದಾಗಿದೆ. ಹಝ್ರ‍ತ್ ಪೈಗಂಬರ್(ಸ) ಅವರ ಶೀವಿಯಿಂದ ನೀವು ಅದನ್ನು ಅನುಭವಿಸುತ್ತಿದ್ದೀರಿ. ಆದ್ದರಿಂದ ನಝ್ರ್ ಮಸ್‌ಅಬ್ ಬಿನ್ ಉಮೈರ್ ಅವರಿಗೆ ಹೇಳಿದರು: ಓ ಮಸ್‌ಅಬ್! ಈ ವ್ಯಕ್ತಿಗಿಂತ ನೀವು ಪ್ರೀತಿಯ ಸಂಬಂಧಿಕರಲ್ಲಿ ನನಗೆ ಹತ್ತಿರವಾಗಿದ್ದೀರಿ. ಆದುದರಿಂದ ನನ್ನನ್ನು ಕೈದಿಗಳಲ್ಲಿ ಒಬ್ಬನನ್ನಾಗಿ ಮಾಡಲು ನಿನ್ನ ಜೊತೆಗಾರನೊಡನೆ ಮಾತಾಡು. ಅಲ್ಲಾಹನ ಆಣೆ! ಅವರು ನನ್ನನ್ನು ವಧಿಸಲು ಹೊರಟಿದ್ದಾರೆ, ಅದಕ್ಕೆ ಮುಸ್‌ಅಬ್ ಅವನಿಗೆ ಹೇಳಿದರು, ನೀವು ಅಲ್ಲಾಹನ ಪುಸ್ತಕದ ಬಗ್ಗೆ ಹೀಗೆ ಹೇಳುತ್ತಿದ್ದಿರಿ, ಮತ್ತು ನೀವು ಹಝ್ರ‍ತ್ ಪೈಗಂಬರ್(ಸ) ಅವರ ಬಗ್ಗೆ ಹೀಗೆಲ್ಲ ಹೇಳುತ್ತಿದ್ದಿರಿ ಮತ್ತು ಅವರ ಸಹಾಬರವರಿಗೆ ಸಂಕಷ್ಟ ತೊಂದರೆಗಳನ್ನು ನೀಡುತ್ತಿದ್ದಿರಿ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–429–430, ಗ್ಝ್ವ ಬದರ್ ಅಲ್‌ಕುಬ್ರ, ದಾರುಲ್ ಮಾರಿಫ ಬೈರೂತ್) ಆದ್ದರಿಂದ ಈ ಹಳೆಯ ವಿಷಯಗಳು ನಿಮ್ಮೊಂದಿಗೆ ಇವೆ. ನಿಮಗೆ ವಧಿಸಲಾಗುತ್ತಿದೆ ಎಂದಾದರೆ ನಿಮ್ಮ ಈ ಅಪರಾಧಕ್ಕೆ ವಧಿಸಲಾಗುತ್ತಿರಬಹುದು.

ನಝ್ರ್ ಬಿನ್ ಹಾರಿಸ್ ಅವರ ಸಹೋದರಿ ಖುತೈಲಾ ಬಿಂತ್ ಹಾರಿಸ್ ಅವರು ತಮ್ಮ ಸಹೋದರನ ಮರಣದ ಬಗ್ಗೆ ಕೆಲವು ಕವನಗಳನ್ನು ವಾಚಿಸಿದರು ಎಂಬ ವರದಿ ಇದೆ. ಕೆಲವರ ಪ್ರಕಾರ, ಇದನ್ನು ಅವರ ಮಗಳು ಹೇಳಿದ್ದರು ಎಂದಾಗಿದೆ ಮತ್ತು ನಂತರ ಆಕೆಯು ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊಂಡರು. ಹಝ್ರ‍ತ್ ಪೈಗಂಬರ್ ಅಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಈ ಪದ್ಯಗಳನ್ನು ಆಲಿಸಿದಾಗ, ಅವರು ತುಂಬಾ ಅಳುತ್ತಿದ್ದರು. ನಂತರ ಹಝ್ರ‍ತ್ ಪೈಗಂಬರ್(ಸ) ಅವರು ಹೇಳಿದರು, ನಝ್ರ್ ಬಿನ್ ಹಾರಿಸ್ ವಧಿಸಲ್ಪಡುವ ಮೊದಲು ಈ ಶ್ಲೋಕಗಳು ನನಗೆ ತಲುಪಿದ್ದರೆ, ನಾನು ಆತನಿಗೆ ದಯೆತೋರುತ್ತಿದ್ದೆ ಮತ್ತು ಅವನನ್ನು ಕ್ಷಮಿಸುತ್ತಿದ್ದೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–430, ಬಾಬ್ ಗ್ಝ್ವ ಎ ಬದರ್ ಅಲ್‌ಕುಬ್ರ, ದಾರುಲ್ ಮಾರಿಫ ಬೈರೂತ್) (ಅಸ್ಸೀರತುನ್ನಬವೀಯ್ಯ ಲಿಇಬ್ನೆ ಹಿಶ್ಯಾಮ್, ಪುಟ–510–511, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಕೆಲವು ಚರಿತ್ರೆಗಾರರು ಇದನ್ನು ನಿರಾಕರಿಸುತ್ತಾರೆ ಮತ್ತು ಕೆಲವರು ಈ ಘಟನೆಯನ್ನೇ ನಿರಾಕರಿಸುತ್ತಾರೆ. ಆದಾಗ್ಯೂ, ಸತ್ಯ ಏನೆಂದು ಅಲ್ಲಾಹನೇ ಬಲ್ಲನು. ಈ ಘಟನೆಯು ನಿಜವಾಗಿಯೂ ಸಂಭವಿಸಿದಲ್ಲಿ, ಈ ಅಭಿವ್ಯಕ್ತಿ ಹಝ್ರ‍ತ್ ಪೈಗಂಬರ್(ಸ) ಅವರ ಮೃಧು ಹೃದಯದಿಂದ ದೂರವಿರುವುದಿಲ್ಲ. ಹಝ್ರ‍ತ್ ಪೈಗಂಬರ್(ಸ) ಅವರು ತುಂಬಾ ಮೃದು ಹೃದಯಿಯಾಗಿದ್ದರು. ಕರುಣೆಯು ನಿಮ್ಮ(ಸ) ಅವರ ಹೃದಯದಲ್ಲಿತ್ತು. ಹಾಗೆಯೇ ನಝ್ರ್ ಬಿನ್ ಹಾರಿಸ್ ಅವರ ಬಗ್ಗೆ ನಾನು ಹೇಳಿದಂತೆ ಅವರು ಕೊಲ್ಲಲ್ಪಟ್ಟಿಲ್ಲ ಎಂಬ ವರದಿಯೂ ಇದೆ, ಬದಲಿಗೆ ಅವನು ಜೀವಂತವಾಗಿದ್ದನು ಮತ್ತು ಹುನೈನ್ ಯುದ್ಧದಲ್ಲಿ ಹಝ್ರ‍ತ್ ಪೈಗಂಬರ್(ಸ) ಅವರನ್ನು ಸೇರಿಕೊಂಡನು ಮತ್ತು ಹಝ್ರ‍ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವನನ್ನು ನೂರು ಒಂಟೆಗಳನ್ನು ಹೃದಯವನ್ನು ಜೋಡಿಸಲು ನೀಡಿದರು. (ಶರ್ಹ್ ಅಲ್–ಝುರ್ಕಾನಿ ಅಲಲ್–ಮವಾಹಿಬ್ ಅಲ್–ದುನ್ನಿಯಾಹ್, ಸಂಪುಟ–1, ಪುಟ–482, ದಾರುಲ್ ಕುತುಬ್ ಅಲ್ ಇಲ್ಮೀಯ)

ನಂತರ ಬದ್ರ್ ಮೈದಾನದಿಂದ ಹಿಂದಿರುಗಿದ ಇತಿಹಾಸದಲ್ಲಿ ಉಲ್ಲೇಖಿಸಲಾದ ಎರಡನೇ ವಧೆ ಉಕ್ಬಾ ಬಿನ್ ಅಬಿ ಮುಯಿತ್ ಅವರದ್ದಾಗಿದೆ. ಮದೀನಾಗೆ ಹೋಗುವ ದಾರಿಯಲ್ಲಿ ಇರ್ಕ್ ಝುಬ್ಯಾದಲ್ಲಿ ವಧಿಸಲ್ಪಟ್ಟರು. ಹಝ್ರ‍ತ್ ಆಸಿಮ್ ಬಿನ್ ಸಾಬಿತ್ ಅನ್ಸಾರಿ(ರ) ಅವರು ಉಕ್ಬಾನನ್ನು ವಧಿಸಿದರು ಮತ್ತು ಒಂದು ವರದಿಯ ಪ್ರಕಾರ ಹಝ್ರ‍ತ್ ಅಲಿ(ರ) ಅವರು ಅವರನ್ನು ವಧಿಸಿದರು. (ಇಬ್ನ್ ಹಿಶಾಮ್ ಅವರಿಂದ ಅಸ್ಸೀರತುನ್ನಬವೀಯ, ಪುಟ–438–439, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್)

ಇಸ್ಲಾಂ ಧರ್ಮದ ವಿರುದ್ಧ ಯುದ್ಧದ ಬೆಂಕಿ ಹೊತ್ತಿಸಿದವರಲ್ಲಿ ನಝ್ರ್ ಬಿನ್ ಹಾರಿಸ್ ಮತ್ತು ಉಕ್ಬಾ ಬಿನ್ ಅಬಿ ಮುಯಿತ್ ಇಬ್ಬರೂ ಸೇರಿದ್ದಾರೆ ಮತ್ತು ಮುಸ್ಲಿಮರ ಮೇಲೆ ಸಂಕಷ್ಟದ ಮತ್ತು ನೋವಿನ ಪರ್ವತಗಳನ್ನು ಒಡೆಯುವವರ ನಾಯಕರಾಗಿದ್ದರು ಎಂದು ಲೇಖಕರೊಬ್ಬರು ಬರೆಯುತ್ತಾರೆ. (ಅಲ್‌ಲೂಲುಲ್ ಮಕ್ನೂನ್ ಸೀರತ್ ಇನ್‌ಸೈಕ್ಲೋಪೀಡಿಯಾ, ಸಂಪುಟ–5, ಪುಟ–490–491, ಮುಕ್ತಾಬಾ ದಾರುಸ್ಸಲಾಮ್) ಅದಕ್ಕಾಗಿಯೇ ಅವರು ಈ ಶಿಕ್ಷೆಯನ್ನು ಪಡೆದರು.

ಆದರೆ, ಈ ಇಬ್ಬರು ಖೈದಿಗಳನ್ನು ದಾರಿಯಲ್ಲಿಯೇ ಕೊಂದಿದ್ದಾರೋ ಇಲ್ಲವೋ ಎಂದು ಖಚಿತವಾಗಿ ಹೇಳಲಾಗದು, ಕೆಲವು ವರದಿಗಳಲ್ಲಿ ಉಕ್ಬಾ ಬಿನ್ ಮುಯುತ್ ಬದರ್ ಮೈದಾನದಲ್ಲಿ ಕೊಲ್ಲಲ್ಪಟ್ಟಿದ್ದಾರೆ ಎಂಬುದು ಸ್ಪಷ್ಟವಾಗಿದೆ. (ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ–477, ದಾರುಲ್ ಕುತುಬ್ ಇಲ್‌ಮಿಯ 2001)

ನಝ್ರ್ ಬಿನ್ ಹಾರಿಸ್‌ನ ಬಗ್ಗೆ ಎರಡು ರೀತಿಯ ವರದಿಗಳಿವೆ. ಆತನು ಕೊಲ್ಲಲ್ಪಟ್ಟನು ಮತ್ತು ಕೊಲ್ಲಲ್ಪಟ್ಟಿಲ್ಲ ಎಂದು, ಅದೇ ರೀತಿ ಆತನು ಹುನೈನ್ ಯುದ್ಧದ ಸಂದರ್ಭದಲ್ಲಿ ಜೀವಂತವಾಗಿದ್ದನು ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು ಎಂಬ ವರದಿಯೂ ಇದೆ ಆದರೆ ಇಂತಹ ವರದಿಗಳನ್ನು ದುರ್ಬಲವೆಂದು ಪರಿಗಣಿಸಲಾಗುತ್ತದೆ.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರ‍ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಬಂಧಿಗಳಾದ ಮುಖಂಡರಲ್ಲಿ ಉಖ್ಬ ಬಿನ್ ಅಬೀ ಮುಈತ್‌ರ ಹೆಸರು ಕೂಡ ಕೆಲವು ಚರಿತ್ರೆಗಾರರು ಪ್ರಸ್ತಾಪಿಸಿರುವರು ಮತ್ತು ಆತನನ್ನು ಬಂಧಿಯಾಗಿರುವಾಗಲೇ ವಧಿಸಲಾಯಿತು ಎಂದು ಬರೆಯಲಾಗಿದೆ. ಆದರೆ ಇದು ಸರಿಯಲ್ಲ. ಹದೀಸ್ ಮತ್ತು ಚರಿತ್ರೆಯಲ್ಲಿ ಬಹಳ ಸ್ಪಷ್ಟವಾಗಿ ಹೀಗೆ ಬಂದಿದೆ: ಉಖ್ಬ ಬಿನ್ ಅಬೀ ಮುಈತ್ ಯುದ್ಧ ಮೈದಾನದಲ್ಲಿ ಕೊಲ್ಲಲ್ಪಟ್ಟನು ಮತ್ತು ಮಕ್ಕದ ಯಾವ ಮುಖಂಡರ ಮೃತಶರೀರಗಳನ್ನು ಹೊಂಡದಲ್ಲಿ ಹೂಳಲಾಗಿತ್ತೋ ಅವುಗಳಲ್ಲಿ ಈತನದ್ದು ಕೂಡ ಇತ್ತು. ಆದರೆ ನಝ್ರ್ ಬಿನ್ ಹಾರಿಸ್‌ರನ್ನು ವಧಿಸಲಾಗಿತ್ತು ಎಂದು ಅನೇಕ ವರದಿಗಳಿಂದ ಸ್ಪಷ್ಟವಾಗುತ್ತದೆ. ಆತನನ್ನು ವಧಿಸಲು ಕಾರಣವೇನಾಗಿತ್ತು ಎಂದರೆ, ಮಕ್ಕದ ಮುಗ್ಧ ಮುಸ್ಲಿಮರು ಕೊಲ್ಲಲ್ಪಡಲು ನೇರವಾದ ಕಾರಣಕರ್ತ ಈತನಾಗಿದ್ದನು. ಆದರೆ ಯಾರನ್ನಾದರೂ ವಧಿಸಲಾಗಿದ್ದರೆ ಅದು ನಝ್ರ್ ಬಿನ್ ಹಾರಿಸ್‌ನನ್ನೇ ಆಗಿತ್ತು ಎಂಬುದು ಖಚಿತವಾದ ಸಂಗತಿಯಾಗಿದೆ. ಆದರೆ ನಝ್ರ್ ಹೊರತು ಪಡಿಸಿ ಬೇರೆ ಯಾವ ಖೈದಿಯನ್ನು ವಧಿಸಲಾಗಿಲ್ಲ ಅಥವಾ ಇಸ್ಲಾಮ್ ನಲ್ಲಿ ಕೇವಲ ಶತ್ರುವಾಗಿ ಮತ್ತು ಯುದ್ಧದಲ್ಲಿ ವಿರೋಧಿಯಾಗಿ ಭಾಗವಹಿಸಿದ ಕಾರಣಕ್ಕಾಗಿ ಕೈದಿಗಳನ್ನು ವಧಿಸುವ ನಿಯಮ ಇತ್ತು, ಹೀಗೆ ಇದರ ಬಗ್ಗೆ ನಂತರ ಪವಿತ್ರ ಖುರ್‌ಆನಿನಲ್ಲಿ ನಿರ್ದಿಷ್ಟ ಆಜ್ಞೆಯನ್ನು ನೀಡಲಾಯಿತು. ಅನೇಕ ವರದಿಗಳು ನಝ್ರ್ ಬಿನ್ ಹಾರಿಸ್‌ನ ವಧೆಯನ್ನು ಉಲ್ಲೇಖಿಸುತ್ತವೆಯಾದರೂ, ಆತನು ಕೊಲ್ಲಲ್ಪಡಲಿಲ್ಲ ಆದರೆ ಬದ್ರ್ ನಂತರ ಸ್ವಲ್ಪ ಕಾಲ ಬದುಕಿದ್ದನು ಎಂದು ಸಾಬೀತುಪಡಿಸುವ ಕೆಲವು ವರದಿಗಳಿವೆ ಎಂದು ನೆನಪಿಡಬೇಕು ಮತ್ತು ಅಂತಿಮವಾಗಿ, ಹುನೈನ್ ಯುದ್ಧದ ಸಂದರ್ಭದಲ್ಲಿ, ಆತನು ಮುಸ್ಲಿಂ ಆಗಿ ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ವಲಯಕ್ಕೆ ಸೇರಿದರು. ಆದರೆ ಈ ವರದಿಗಳು ದುರ್ಬವೆಂದು ಪರಿಗಣಿಸಲಾಗುತ್ತದೆ. ಅಲ್ಲಾಹನು ಬಲ್ಲನು.

ಆದಾಗ್ಯೂ, ಯಾವುದೇ ಕೈದಿಗಳು ಕೊಲ್ಲಲ್ಪಟ್ಟಿದ್ದರೆ, ಅವರಲ್ಲಿ ನಝ್ರ್ ಬಿನ್ ಹಾರಿಸ್ ಕಿಸಾಸ್‌ನಲ್ಲಿ ಕೊಲ್ಲಲ್ಪಟ್ಟವರು. ಮತ್ತು ಅವನ ಬಗ್ಗೆ ಹೀಗೂ ವರದಿ ಲಭಿಸಿದೆ ಅಂದರೆ ಅವನ ವಧೆಯ ನಂತರ, ಹಝ್ರ‍ತ್ ಪಯಗಂಬರ್(ಸ) ಅವರು ಅವರ ಸಹೋದರಿಯ ನೋವಿನ ಕವಿತೆಗಳನ್ನು ಅದರಲ್ಲಿ ಕರುಣೆಗಾಗಿ ಮನವಿ ಮಾಡಲಾಗಿತ್ತು ಅದನ್ನು ಕೇಳಿದಾಗ. ಹೇಳಿದರು: ಈ ಪದ್ಯಗಳು ನನಗೆ ಮೊದಲೇ ತಲುಪಿದ್ದರೆ, ನಾನು ನಝ್ರ್ ಅನ್ನು ಕ್ಷಮಿಸುತ್ತಿದ್ದೆ. ಆದಾಗ್ಯೂ, ನಝ್ರ್ ಹೊರತುಪಡಿಸಿ ಯಾವುದೇ ಕೈದಿ ಕೊಲ್ಲಲ್ಪಡಲಿಲ್ಲ. (ಸೀರತ್ ಖಾತಮುನ್ನಬೀಈನ್, ಹಝ್ರ‍ತ್

ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-366-367)

ಇದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರ ನಿಲುವಾಗಿದೆ, ಅವರು ಇದನ್ನು ಐತಿಹಾಸಿಕ ಪುಸ್ತಕಗಳಿಂದ ಪಡೆದುಕೊಂಡಿದ್ದಾರೆ.

ಬದ್ರ್ ಯುದ್ಧದಲ್ಲಿ ಮುಶ್ರಿಕರ ದಿಗ್ಗಜರಾದ ಮುಖಂಡರ ಸಮೇತ ಎಪ್ಪತ್ತು ಸತ್ಯನಿಷೇಧಿಗಳು ವಧಿಸಲ್ಪಟ್ಟರು ಮತ್ತು ಎಪ್ಪತ್ತು ಜನರನ್ನು ಬಂಧಿಸಲಾಯಿತು. ಕೈದಿಗಳ ಸಂಖ್ಯೆಗೆ ಸಂಬಂಧಿಸಿದಂತೆ, 49 ಮತ್ತು 74 ರ ಸಂಖ್ಯೆಯ ಹೇಳಿಕೆಗಳೂ ಇವೆ. ಕೆಲವು ವರದಿಗಳಿವೆ, ಆದರೆ ಪ್ರಸಿದ್ಧ ಮತ್ತು ಸರಿಯಾದ ಎಪ್ಪತ್ತು ನಾಸ್ತಿಕರನ್ನು ಬಂದಿಸಿದ್ದರು ಎಂದಾಗಿದೆ. (ದಾಯೆರಃ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಸಂಪುಟ-6, ಪುಟ-245, ದಾರುಲ್ ಮಾರಿಫ ಲಾಹೋರ್)

ಇದನ್ನು ಇತಿಹಾಸದ ವಿವಿಧ ಪುಸ್ತಕಗಳಲ್ಲಿ 70 ಎಂದು ಬರೆಯಲಾಗಿದೆ. ಸಹೀಹ್ ಬುಖಾರಿಯಲ್ಲಿನ ವರದಿಗಳಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಬದ್ರ್ ಯುದ್ಧದ ದಿನದಂದು 140 ಜನರಿಗೆ ನಷ್ಟ ಉಂಟುಮಾಡಿದರು ಎಂದು ಸಹೀಹ್ ಬುಖಾರಿಯಲ್ಲಿ ಬರೆಯಲಾಗಿದೆ. ಎಂದರೆ, 70 ಮಂದಿಗಳನ್ನು ಬಂಧಿಸಲಾಯಿತು ಮತ್ತು 70 ಮಂದಿಗಳನ್ನು ವಧಿಸಲಾಯಿತು. (ಸಹೀಹ್ ಅಲ್-ಬುಖಾರಿ, ಕಿತಾಬುಲ್ ಮುಘಾಜಿ, ಹದೀಸ್ ಸಂಖ್ಯೆ-3986)

ಸಹಾಬಿಯರು ಈ ಕೈದಿಗಳೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಅವರಲ್ಲಿ ಕೆಲವು ಸೌಭಾಗ್ಯಶಾಲಿಗಳಾದ ಕೈದಿಗಳು ಇಸ್ಲಾಮಿನ ಅಧ್ಯಾಪನೆಗಳು ಮತ್ತು ಸಹಾಬಿಯರ ಸ್ವಭಾವಗುಣಗಳಿಂದ ಪ್ರಭಾವಿತರಾಗಿ ಮುಸ್ಲಿಮರಾದರು. ಅವರಲ್ಲಿ ಕೆಲವರು ಹೆಸರುಗಳು ಹೀಗಿವೆ: ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್, ಅಖೀಲ್ ಬಿನ್ ಅಬೀ ತಾಲಿಬ್, ನೌಫಲ್ ಬಿನ್ ಹಾರಿಸ್, ಅಬುಲ್‌ಆಸ್ ಬಿನ್ ರಬೀಅ್, ಅಬೂ ಅಝೀಝ್, ಖಾಲಿ ಬಿನ್ ಹಿಶಾಂ, ಅಬೂ ದಾಅ ಬಿನ್ ಸಹ್‌ಮಿ, ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಖಲ್‌ಫ್ ಜಮ್‌ಹೀ, ವಹಬ್ ಬಿನ್ ಉಮ್ಮೈರ್ ಜಮ್‌ಹೀ, ಸುಹೈಲ್ ಬಿನ್ ಅಮ್ರ್ ಆಮಿರಿ. ಇವರೆಲ್ಲರೂ ಪರಿಹಾರಧನವನ್ನು (ಫಿದ್‌ಯ) ಪಾವತಿ ಮಾಡಿಕೊಂಡು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿಕೊಂಡಿದ್ದರು.

(ಸಬ್ಲುಲ್ ಹುದಾ ವರ್‌ಶ್ಶಾದ್, ಸಂಪುಟ-4, ಪುಟ-78-79, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಬದ್ರ್ ಯುದ್ಧದೊಂದಿಗೆ ಒಂದು ಸಂಬಂಧ ರೋಮನ್ ಸಾಮ್ರಾಜ್ಯದ ವಿಜಯದೊಂದಿಗೆ ಕೂಡ ಇದೆ.

ರೋಮನ್ ಸಾಮ್ರಾಜ್ಯದ ವಿಜಯದ ಕುರಿತು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು ಮತ್ತು ಇದರ ಸಂಬಂಧ ಬದ್ರ್ ಯುದ್ಧದೊಂದಿಗೂ ಇದೆ. ಆದ್ದರಿಂದ ಇಲ್ಲಿ ಅದರ ಬಗ್ಗೆ ಪ್ರಸ್ತಾಪಿಸುವುದು ಅನುಯೋಜ್ಯವಾಗಿದೆ. ನುಬುವ್ವತ್ತಿನ ಐದನೇ ವರ್ಷದಲ್ಲಿ ಸೂರಃ ರೂಮ್ ಅವತೀರ್ಣಗೊಂಡಿತ್ತು. ಅದರಲ್ಲಿ ರೋಮನ್ ಸಾಮ್ರಾಜ್ಯದ ವಿಜಯದ ಬಗ್ಗೆ ಭವಿಷ್ಯವಾಣಿ ಇತ್ತು. (ದಲಾಎಲುನ್ನುಬುವ್ವತಿ ಲಿಲ್ ಬೈಹಖಿ, ಸಂಪುಟ-7, ಪುಟ-143, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1988) (ಸೀರತುನ್ನಬೀ(ಸ), ಅಲ್ಲಮ ಶಿಬ್ಲಿ ನುಮಾನಿ, ಸಂಪುಟ-2 ಭಾಗ-3, ಪುಟ-315, ಇದಾರ ಇಸ್ಲಾಮಿಯಾತ್ ಸೆಪ್ಟೆಂಬರ್ 2002)

ಅದರ ವಿವರವನ್ನು ನಾನು ಮುಂದೆ ವಿವರಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಸೂರತು ರೂಮ್‌ನ ಆರಂಭಿಕ ಆಯತ್‌ಗಳನ್ನು ಅವತರಿಸಿದಾಗ ಹಝ್ರತ್ ಅಬೂಬಕರ್ ಸಿದ್ದೀಖ್ (ರ) ಮಕ್ಕಾದ ಹೊರವಲಯದಲ್ಲಿ ಈ ಸೂರಾದ ಈ ಆಯತ್‌ಗಳನ್ನು ಪಠಿಸುತ್ತಾ ಘೋಷಿಸಲು ಪ್ರಾರಂಭಿಸಿದರು: **ಅಲಿಫ್‌ಲಾಮ್‌ಮೀಮ್- ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ವಲಬಿಹಿಮ್ ಸಯಗ್‌ಲಿಬೂನ- ಫೀ ಬಿಝ್ಇ ಸಿನೀನ** (ಅರ್ರೂಮ್: 2-5) ಅಂದರೆ: ಅಲಿಫ್ ಲಾಮ್ ಮೀಮ್, ರೋಮನರು ಪರಜಿತರಾದರು- ಅತಿ ಸಮಿಪವಾದೊಂದು ದೇಶದಲ್ಲಿ. ಅವರು ತಮ್ಮ ಪರಭವದ ಬಳಿಕ ವಿಜಯಿಗಳಾಗುವರು. ಕೆಲವೇ ವರ್ಷಗಳಲ್ಲಿ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯ ವಿಶ್ವಾಸಿಗಳು ಹರ್ಷಪುಳಕಿತರಾಗುವರು. ಅಂದರೆ, ರೋಮನ್ ಜನರು ಹತ್ತಿರದ ಭೂಮಿಯಲ್ಲಿ ಸೋಲಿಸಲ್ಪಡುವರು, ಮತ್ತು ಅವರ ಸೋಲಿನ ನಂತರ, ಅವರು ಖಂಡಿತವಾಗಿಯೂ ಮೂರರಿಂದ ಒಂಬತ್ತು ವರ್ಷಗಳ ಅವಧಿಯಲ್ಲೇ ಮತ್ತೆ ವಿಜಯಶಾಲಿಯಾಗುತ್ತಾರೆ.

ಈ ಆಯತ್ ಅವತರಿಸಿದಾಗ, ಇದು ಮಕ್ಕಾದ ವಿಷಯವಾಗಿತ್ತು, ಮಕ್ಕಾದ ಅವಿಶ್ವಾಸಿಗಳು ಪರ್ಷಿಯಾದ ಜನರು ರೋಮ್ ಜನರ ಮೇಲೆ ಮೇಲುಗೈ ಸಾಧಿಸಬೇಕೆಂದು ಬಯಸಿದ್ದರು ಏಕೆಂದರೆ ಇವರು ಮತ್ತು ಅವರು ವಿಗ್ರಹಾರಾಧಕರಾಗಿದ್ದರು. ಪರ್ಷಿಯನ್ನರು ಮತ್ತು ಇರಾನಿಯನ್ನರು ವಿಗ್ರಹಾರಾಧಕರಾಗಿದ್ದರು, ಅಗ್ನಿ ಆರಾಧಕರಾಗಿದ್ದರು ಮತ್ತು ಮಕ್ಕಾದ ಜನರು ಸಹ ವಿಗ್ರಹಾರಾಧಕರೂ ಆಗಿದ್ದರು. ಪರ್ಷಿಯನ್ನರು ಮೇಲುಗೈ ಸಾಧಿಸಬೇಕೆಂದು ಅವರು ಬಯಸಿದ್ದರು ಮತ್ತು ಮುಸ್ಲಿಮರು, ರೋಮನ್ನರು ಪರ್ಷಿಯನ್ನರ ಮೇಲೆ ಮೇಲುಗೈ ಸಾಧಿಸಲು ಇಷ್ಟಪಡುತ್ತಿದ್ದರು ಏಕೆಂದರೆ ಅವರು ಗ್ರಂಥಾನುಸಾರಿಗಳಾಗಿದ್ದರು.

ಅವರು ಈ ವಿಷಯವನ್ನು ಹಝ್ರತ್ ಅಬುಬಕರ್(ರ) ಅವರಲ್ಲಿ ಪ್ರಸ್ತಾಪಿಸಿದರು ಮತ್ತು ಹಝ್ರತ್ ಅಬು ಬಕರ್(ರ) ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಅದನ್ನು ಪ್ರಸ್ತಾಪಿಸಿದಾಗ ಅವರು ಹೇಳಿದರು, ಅವರು ಖಂಡಿತವಾಗಿಯೂ ವಿಜಯಶಾಲಿಯಾಗುತ್ತಾರೆ, ಅಂದರೆ ರೋಮನ್ನರು ಮೇಲುಗೈ ಸಾಧಿಸುತ್ತಾರೆ. ಹಜ್‌ರತ್ ಅಬೂಬಕರ್(ರ) ಅವರು ಬಹುದೇವತಾವಾದಿಗಳ ಬಳಿ ಇದನ್ನು ಪ್ರಸ್ತಾಪಿಸಿದಾಗ ಅವರು ಹೇಳಿದರು: ನಮ್ಮ ಮತ್ತು ನಿಮ್ಮ ನಡುವೆ ಒಂದು ಅವಧಿಯನ್ನು ನಿಗದಿಪಡಿಸಿ, ಅಂದರೆ ಒಂದು ಷರತ್ತು ಹಾಕಿ. ನಾವು ಮೇಲುಗೈ ಸಾಧಿಸಿದರೆ ನಮಗೆ ಹೀಗೆಲ್ಲ ಆಗುವುದು ಮತ್ತು ಮತ್ತು ನೀವು ಮೇಲುಗೈ ಸಾಧಿಸಿದರೆ, ಹೀಗೆಲ್ಲ ನಿಮಗೆ ಸಂಭವಿಸುತ್ತದೆ ಎಂದು ಅವರು ಐದು ವರ್ಷಗಳ ಅವಧಿಯನ್ನು ನಿಗದಿಪಡಿಸಿದರು. ವರದಿಗಳ ಪ್ರಕಾರ, ಆರು ವರ್ಷಗಳ ಅವಧಿಯನ್ನು ಇರಿಸಲಾಯಿತು. ರೋಮ್ ಪರ್ಷಿಯಾವನ್ನು ವಶಪಡಿಸಿಕೊಂಡ ದಿನದಂದು ಸತ್ಯವಿಶ್ವಾಸಿಗಳು ಸಂತೋಷಪಟ್ಟರು ಮತ್ತು ಬದ್ರ್ ದಿನದಂದು ಜಿಬ್ರೀಲ್(ಅ) ಈ ವಿಜಯದ ಸುದ್ದಿಯೊಂದಿಗೆ ಬಂದು ಅವರಿಗೆ ಬದ್ರ್‌ನಲ್ಲಿ ಬಹುದೇವತಾವಾದಿಗಳ ವಿರುದ್ಧ ಸಹಾಯ ಮಾಡಿದಾಗ ಅವರು ಅದರ ಬಗ್ಗೆ ತಿಳಿದುಕೊಂಡರು ಎಂದು ಶರ್ಹ್ ಸುನನ್ ಅಲ್-ತಿರ್ಮಿದಿ ತಹಫತ್ ಅಲ್-ಅಹುದ್ವಿಯಲ್ಲಿ ಬರೆಯಲಾಗಿದೆ. (ತೊಹ್‌ಫ ಅಲ್‌ಅಹೂಝಿ ಶರಹ್ ಸುನನ್ ಅತ್ತಿರ್ಮಿಧಿ, ಸಂಪುಟ-2, ಪುಟ-2169, ಮಕ್ತಬ ಬೈತುಲ್ ಅಫ್ಕಾರ್ ಅದ್ದೌಲಿಯ) (ಸುನನ್ ಅತ್ತಿರ್ಮಿಧಿ, ಅಬ್ವಾಬ್ ತಫ್ಸೀರುಲ್ ಖುರ್‌ಆನ್, ಹದೀಸ್-3194) ಇದು ಬದರ್‌ನೊಂದಿಗೆ ಇರುವ ಸಂಬಂಧವಾಗಿದೆ ಅಂದರೆ ಬದರ್ ವಿಜಯಶಾಲಿಯಾದ ದಿನದಂದು ರೋಮನ್ನರು ವಿಜಯದ ಒಳ್ಳೆಯ ಸುದ್ದಿಯನ್ನು ಸ್ವೀಕರಿಸಿದರು.

ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಇರಾನಿಯರ ಮತ್ತು ರೋಮನರ ನಡುವೆ ಯುದ್ಧ ನಡೆದಾಗ ಮುಸ್ಲಿಮರು ರೋಮನರ ವಿಜಯವನ್ನು ಇಷ್ಟಪಡುತ್ತಿದ್ದರು. ಏಕೆಂದರೆ ಅವರು ಗ್ರಂಥಾನುಸಾರಿಗಳಾಗಿದ್ದರು. ಆದರೆ ಖುರೈಶಿನ ಸತ್ಯನಿಷೇಧಿಗಳು ಇರಾನಿಯರ ವಿಜಯವನ್ನು ಇಷ್ಟಪಡುತ್ತಿದ್ದರು. ಏಕೆಂದರೆ ಅವರು ಅಗ್ನಿಪೂಜಕರಾಗಿದ್ದರು. ಈ ಮಾತಿನ ಮೇಲೆ ಹಝ್ರತ್ ಅಬೂಬಕರ್(ರ) ಅಬೂಜಹಲ್‌ನೊಡನೆ ಬಾಜಿ ಕಟ್ಟಿದರು ಮತ್ತು ಐದು ವರ್ಷಗಳ ಕಾಲಾವಧಿಯನ್ನು ನಿರ್ಣಯಿಸಲಾಯಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಿ ಬಿಝ್‌ಉನ್ ಎಂಬ ಪದವನ್ನು ಬಳಸಲಾಗಿದೆ. ಬಿಝ್‌ಉನ್ ಎಂಬುದು 9 ಅಥವಾ ಏಳು ವರ್ಷಗಳನ್ನು ಸೂಚಿಸುತ್ತದೆ. ಆದ್ದರಿಂದ ಕಾಲಾವಧಿಯನ್ನು ವರ್ಧಿಸು. ಅನಂತರ ಹಝ್ರತ್ ಅಬೂಬಕರ್(ರ) ಹಾಗೆಯೇ ಮಾಡಿದರು. ಅನಂತರ ರೋಮನರು ವಿಜಯಶಾಲಿಗಳಾದರು. ಶೋಬಿ ಹೇಳುತ್ತಾರೆ: ಆ ಕಾಲದಲ್ಲಿ ಬಾಜಿ ಕಟ್ಟುವುದು ಧರ್ಮಬದ್ಧವಾಗಿತ್ತು.

ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾರೆ: **ಅಲಿಫ್‌ಲಾಮ್‌ಮೀಮ್- ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ವಲಬಿಹಿಮ್ ಸಯಗ್‌ಲಿಬೂನ- ಫೀ ಬಿಝ್ಇ ಸಿನೀನ; ಲಿಲ್ಲಾಹಿಲ್‌ಅಮ್ರು ಮಿನ್ ಖಬ್ಲು ಮಿಮ್ ಬಅದಿ; ವ ಯೌಮಿಝಿಂಯ್ಯಫ್ರಹುಲ್ ಮುಮಿನೂನ- ಬಿನಸ್ರಿಲ್ಲಾಹಿ** (ಅರ್ರೂಮ್: 2-6) ಅಂದರೆ: ಅಲಿಫ್ ಲಾಮ್ ಮೀಮ್, ಅಂದರೆ: ನಾನು ಅಲ್ಲಾಹ್ ಸರ್ವಜ್ಞಾನಿಯಾಗಿದ್ದೇನೆ, ರೋಮನರು ಪರಜಿತರಾದರು- ಅತಿ ಸಮಿಪವಾದೊಂದು ದೇಶದಲ್ಲಿ. ಅವರು ತಮ್ಮ ಪರಭವದ ಬಳಿಕ ವಿಜಯಿಗಳಾಗುವರು. ಮೂರರಿಂದ ಒಂಬತ್ತು ವರ್ಷಗಳ ಅವಧಿಗೆ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯ ವಿಶ್ವಾಸಿಗಳು ಹರ್ಷಪುಳಕಿತರಾಗುವರು. ಅದು ಅಲ್ಲಾಹನ ಸಹಾಯದಿಂದ ಇರುತ್ತದೆ. ಮತ್ತು ಆ ಸಮಯದಲ್ಲಿ ಬಾಜಿ ಕಟ್ಟುವುದು ಕಾನೂನುಬದ್ಧವಾಗಿತ್ತು ಎಂದು ಶಾಅ್‌ಬಿ ಹೇಳುತ್ತಾರೆ. (ಉಮ್ದತುಲ್ ಖಾರಿ, ಶರಹ್ ಸಹೀಹ್ ಅಲ್‌ಬುಖಾರಿ, ಸಂಪುಟ-7, ಪುಟ-29, ದಾರುಲ್ ಫಿಕರ್ ಬೈರೂತ್)

ಹಝ್ರತ್ ಪೈಗಂಬರ್(ಸ) ಯಾವ ಘಟನೆಗಳ ಬಗ್ಗೆ ಭವಿಷ್ಯ ನುಡಿದಿದ್ದರೋ ಅವುಗಳಲ್ಲಿ ಸುವ್ಯಕ್ತವಾದ ಮತ್ತು ಮಹತ್ತಾದ ಒಂದು ರೋಮ್ ವಿಜಯದ ಭವಿಷ್ಯವಾಣಿಯಾಗಿತ್ತು.

ಅರೇಬಿಯದ ಇರು ದಿಕ್ಕುಗಳಲ್ಲಿ ಇರಾನ್ ಮತ್ತು ರೋಮಿನ ಆಡಳಿತಗಳು ಇದ್ದುವು. ಆ ಸಮಯದಲ್ಲಿ, ಇರಾನ್‌ನ ಕಿರೀಟ ರಾಜಕುಮಾರ ಖುಸ್ರೋ ಮತ್ತು ರೋಮ್‌ನ ಆಡಳಿತಗಾರ ಹೆರಾಕಲ್ ಆಗಿದ್ದನು. ಈ ಎರಡು ರಾಜ್ಯಗಳ ನಡುವೆ ಕೆಲವು ಕಾಲ ಯುದ್ಧಗಳ ಸರಣಿ ನಡೆಯಿತು.

ಕ್ರಿ.ಶ. 614 ರಲ್ಲಿ, ನಬುವ್ವತ್‌ನ ಐದನೇ ವರ್ಷ, ಈ ಎರಡು ನೆರೆಯ ರಾಜ್ಯಗಳ ನಡುವೆ ಭೀಕರ ಯುದ್ಧವು ಜಾರಿಯಲ್ಲಿತ್ತು. ಈ ಎರಡು ಸಮುದಾಯಗಳಲ್ಲಿ ಯಾರೂ ಇಸ್ಲಾಂ ಧರ್ಮವನ್ನು ಸ್ವೀಕರಿಸದಿದ್ದರೂ, ರೋಮನ್ನರು ಯೇಸುವಿನ ಅನುಯಾಯಿಗಳಾಗಿದ್ದರು ಮತ್ತು ಗ್ರಂಥಾನುಸಾರಿಯಾಗಿದ್ದರು, ಮತ್ತು ಇರಾನಿಯನ್ನರ ನಂಬಿಕೆಗಳು ಮೆಕ್ಕಾದ ಬಹುದೇವತಾವಾದಿಗಳ ನಂಬಿಕೆಗಳೊಂದಿಗೆ ಹೊಂದಿಕೆಯಾಗುತ್ತಿದ್ದವು, ಆದ್ದರಿಂದ ಮುಸ್ಲಿಮರನ್ನು ರೋಮನ್ ಕ್ರೈಸ್ತರೊಂದಿಗೆ ಮತ್ತು ಮಕ್ಕಾದ ಬಹುದೇವತಾವಾದಿಗಳನ್ನು ಪರ್ಷಿಯನ್ನರೊಂದಿಗೆ ಸಂಯೋಜಿಸುವುದು ಅಗತ್ಯವಾಗಿತ್ತು. ಆದ್ದರಿಂದ, ಮುಸ್ಲಿಮರು ಮತ್ತು ಅವಿಶ್ವಾಸಿ ಖುರೈಷಿಗಳು ಯುದ್ಧದ ಫಲಿತಾಂಶಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಈ ಎರಡು ರಾಜ್ಯಗಳ ಗಡಿಗಳು ಟೈಗ್ರಿಸ್ ಮತ್ತು ಯೂಫ್ರಟಿಸ್ ನದಿಗಳ ದಡದಲ್ಲಿ ಭೇಟಿಯಾಗುತ್ತಿದ್ದವು. ರೋಮನ್ ಸಾಮ್ರಾಜ್ಯವು ಪೂರ್ವ ಏಷ್ಯಾದ ಗಡಿರೇಖೆ ಇರಾಕ್, ಸಿರಿಯಾ, ಪ್ಯಾಲೆಸ್ಟೈನ್ ಮತ್ತು ಈಜಿಪ್ಟ್‌ನಲ್ಲಿ ಹರಡಿಕೊಂಡಿತ್ತು. ಇರಾನಿಯನ್ನರು ಎರಡೂ ಕಡೆಯಿಂದ ಅಕ್ರಮಣವನ್ನು ಪ್ರಾರಂಭಿಸಿದರು. ಒಂದೆಡೆ, ಅವರು ಟೈಗ್ರಿಸ್ ಮತ್ತು ಯೂಫ್ರಟಿಸ್ ದಡದಿಂದ ಸಿರಿಯಾ ಕಡೆಗೆ ಮುನ್ನಡೆದರು ಮತ್ತು ಇನ್ನೊಂದೆಡೆ, ಅವರು ಅಜೆರ್ಬೈಜಾನ್‌ನಿಂದ ಅರ್ಮೇನಿಯಾ ಮೂಲಕ ಏಷ್ಯಾ ಮೈನರ್ ಕಡೆಗೆ ಪ್ರಸ್ತುತ ಅನಾಟೋಲಿಯಾವನ್ನು ಪ್ರವೇಶಿಸಿದರು ಮತ್ತು ರೋಮನ್ನರನ್ನು ಎರಡೂ ಬದಿಗಳಿಂದ ಅವರನ್ನು ಹಿಂದಕ್ಕೆ ತಳ್ಳಿ ಸಮುದ್ರಕ್ಕೆ ತಳ್ಳಿದರು. ಸಿರಿಯಾದ ದಿಕ್ಕಿನಲ್ಲಿ, ಅವರು ರೋಮನ್ನರಿಂದ ಈ ಪವಿತ್ರ ಭೂಮಿಯಲ್ಲಿ ಒಂದರ ನಂತರ ಒಂದು ನಗರವನ್ನು ಪಡೆದುದುಕೊಂಡರು. 614 ರಲ್ಲಿ, ಪ್ಯಾಲೆಸ್ಟೈನ್ ಮತ್ತು ಅದರ ಪವಿತ್ರ ನಗರ ಜೆರುಸಲೆಮ್ ಇರಾನಿಯನ್ನರ ವಶದಲ್ಲಿ ಬಂದಿತು. ಕಸೀಸಿಯಾಗಳನ್ನು (ಯಹೂದಿಗಳ ದೇವಾಲಯಗಳು) ನಾಶಪಡಿಸಲಾಯಿತು. ಧಾರ್ಮಿಕ ಗುರುತುಗಳನ್ನು ಅವಮಾನಿಸಲಾಯಿತು. ಇರಾನ್ ಚಕ್ರವರ್ತಿಯ ಅರಮನೆಯನ್ನು ಮೂವತ್ತು ಸಾವಿರ ಸತ್ತ ತಲೆಗಳಿಂದ ಅಲಂಕರಿಸಲಾಗಿತ್ತು, ಅವರನ್ನು ಕೊಂದು ಅವರ ತಲೆಗಳನ್ನು ಅರಮನೆಯಲ್ಲಿ ಇರಿಸಲಾಯಿತು. ಇರಾನಿನ ವಿಜಯಗಳ ಪ್ರವಾಹವು ಇದನ್ನು ಮೀರಿ ಕ್ರಿ.ಶ. 616 ರಲ್ಲಿ ಇಡೀ ನೈಲ್ ಕಣಿವೆ ಅಂದರೆ ಇಜಿಪ್ಟ್ ಸಮ್ರಾಜ್ಯವನ್ನು ಆವರಿಸಿತು. ಮತ್ತು ಅಂತಿಮವಾಗಿ ಅಲೆಕ್ಸಾಂಡ್ರಿಯಾದ ಕರಾವಳಿಯಲ್ಲಿ ನಿಂತುಕೊಂಡಿತು ಮತ್ತು ಮತ್ತೊಂದೆಡೆ, ಎಲ್ಲಾ ಏಷ್ಯಾದ ಕೂಚಕ್ ಅನ್ನು ವಶಪಡಿಸಿಕೊಂಡು ಬಾಸ್ಫರಸ್ ದಡದಲ್ಲಿ ನಿಂತುಕೊಂಡಿತು. ಮತ್ತು ಕಾನ್ಸ್ಟಾಂಟಿನೋಪಲ್ ಗೋಡೆಗಳಿಗೆ ಹೋಗಿ ಬಡಿತು. ಇರಾನ್‌ನ ವಿಜಯಶಾಲಿ ಸೈನ್ಯವು ಹೋಗಿ ರೋಮ್ ಚಕ್ರವರ್ತಿಯ ಮುಂದೆ ತಮ್ಮ ಡೇರೆಗಳನ್ನು ಹಾಕಿತು ಮತ್ತು ಈಗ ರೋಮನ್ನರ ಬದಲಿಗೆ, ಇರಾಕ್, ಸಿರಿಯಾ, ಪ್ಯಾಲೆಸ್ಟೈನ್, ಈಜಿಪ್ಟ್ ಮತ್ತು ಏಷ್ಯಾ ಕೂಚಕ್‌ನ ವಿಶಾಲ ಪ್ರದೇಶಗಳಲ್ಲಿ ಇರಾನ್ ಸರ್ಕಾರವನ್ನು ಸ್ಥಾಪಿಸಲಾಯಿತು. ಎಲ್ಲೆಡೆ ಅಗ್ನಿಕುಂಡಗಳನ್ನು ನಿರ್ಮಿಸಲಾಯಿತು ಮತ್ತು ಕ್ರಿಸ್ತನ ಬದಲಿಗೆ ಬೆಂಕಿ ಮತ್ತು ಸೂರ್ಯನನ್ನು ಬಲವಂತವಾಗಿ ಆರಾಧಿಸಲಾಯಿತು. ರೋಮನ್ ಸಾಮ್ರಾಜ್ಯದ ಈ ವಿನಾಶವನ್ನು ನೋಡಿ, ರೋಮನ್ ಚಕ್ರವರ್ತಿಯ ವಿಶಾಲ ಸಾಮ್ರಾಜ್ಯದಲ್ಲಿ ದಂಗೆಗಳು ಹುಟ್ಟಿಕೊಂಡವು. ಆಫ್ರಿಕಾದಲ್ಲಿ ದಂಗೆಯೂ ಇತ್ತು. ಕಾನ್ಸ್ಟಾಂಟಿನೋಪಲ್ ಬಳಿಯೇ, ಯುರೋಪಿನ ವಿವಿಧ ಸಮುದಾಯಗಳು ಹತ್ಯಾಕಾಂಡಗಳಲ್ಲಿ ತೊಡಗಿದವು. ಆದ್ದರಿಂದ, ಆ ಸಮಯದಲ್ಲಿ, ರೋಮನ್ ಸಾಮ್ರಾಜ್ಯವು ಚಿದ್ರ ಚಿದ್ರವಾಯಿತು.

ಯುದ್ಧದ ಫಲಿತಾಂಶವು ತುಂಬಾ ನಿರಾಶಾದಾಯಕವಾಗಿದ್ದಾಗ, ಮುಸ್ಲಿಮರು ಖಂಡಿತವಾಗಿಯೂ ದುಃಖಿತರಾದರು ಮತ್ತು ಅವಿಶ್ವಾಸಿಗಳು ಸಂತೋಷಪಟ್ಟರು ಮತ್ತು ನಮ್ಮ ಸಹೋದರರು ವಿಜಯಶಾಲಿಯಾದಂತೆಯೇ, ನೀವು ನಮ್ಮೊಂದಿಗೆ ಹೋರಾಡಿದ್ದರೆ, ನಾವು ವಿಜಯಶಾಲಿಯಾಗುತ್ತಿದ್ದೆವು ಎಂದು ಅವರು ಮುಸ್ಲಿಮರನ್ನು ವ್ಯಂಗ್ಯ ಮಾಡಿದರು. ಈ 'ಮುಸಲ್ಮಾನರ ಮೇಲೆ ನಾವೇ ಮೇಲುಗೈ ಸಾಧಿಸುತ್ತೇವೆ' ಎಂದು ಅವಿಶ್ವಾಸಿಗಳು ಹೇಳಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆ ಸಮಯದಲ್ಲಿ ರೋಮನ್ನರ ಸ್ಥಿತಿಯು ಶೋಚನೀಯವಾಗಿತ್ತು, ಖಜಾನೆ ಖಾಲಿಯಾಗಿತ್ತು. ಸೈನ್ಯ ಚದುರಿ ಹೋಗಿತ್ತು. ದೇಶದಲ್ಲಿ ಬಂಡಾಯವೆದ್ದಿತ್ತು. ಹರ್‌ಕಲ್ ಐಷಾರಾಮಿ ಮತ್ತು ಅಯೋಗ್ಯ ಅರಸನಾಗಿದ್ದನು. ಯಾರಿಗೂ ಯೋಗ್ಯವಲ್ಲದ ಅಂತಹ ಮಹಾನ್ ಅರಸನಾಗಿದ್ದನು. ಲಜ್ಜಾಹೀನವಾದ ರೀತಿಯ ತೆರಿಗೆಯನ್ನು ರೋಮನರ ಮೇಲೆ ವಿಧಿಸಲಾಗಿತ್ತು. ಚಿನ್ನ, ಬೆಳ್ಳಿ, ರೇಶ್ಮೆಯ ಕಟ್ಟು ಮತ್ತು ಒಂದು ಸಾವಿರ ಕನ್ಯೆಯರನ್ನು ಇರಾನಿಯರಿಗೆ ಒಪ್ಪಿಸಲು ಹೇಳಲಾಗಿತ್ತು.

ರೋಮನರ ದುರ್ಬಲ ಸ್ಥಿತಿ ಏನಾಗಿತ್ತು ಎಂದರೆ, ಅವರು ಈ ಲಜ್ಜಾಹೀನ ಶರತ್ತುಗಳನ್ನು ಸ್ವೀಕಾರ ಮಾಡಿಕೊಂಡರು. ಇರಾನಿನ ಅಹಂಭಾವಿ ಅರಸನಾದ ಖುಸ್ರೋ ಹೇಳಿದನು: ಸರಿ, ನೀವು ಅದನ್ನು ಸ್ವೀಕರಿಸಿದ್ದೀರಿ, ಆದರೆ ನನಗೆ ಇದಲ್ಲ, ಬದಲಿಗೆ ಹರ್ಕಲ್ ಸ್ವತಃ ನನ್ನ ಸಿಂಹಾಸನದ ಕೆಳಗೆ ಸರಪಳಿಯಲ್ಲಿ ಬಂಧಿಸಲ್ಪಡಬೇಕು. ರೋಮ್‌ನ ಚಕ್ರವರ್ತಿ ನನ್ನ ಸಿಂಹಾಸನದ ಅಡಿಯಲ್ಲಿ ನನಗೆ ಬೇಕು, ಮತ್ತು ರೋಮನ್ ಚಕ್ರವರ್ತಿ ತನ್ನ ಶಿಲುಬೆಗೇರಿಸಿದ ದೇವರನ್ನು ತ್ಯಜಿಸಿ ಸೂರ್ಯ ದೇವರಿಗೆ ತಲೆಬಾಗುವವರೆಗೂ ನಾನು ಸಂಧಾನ ಮಾಡುವುದಿಲ್ಲ. ಹೀಗೆ ಬರೆಯುವವರು ಬರೆಯುತ್ತಾರೆ ಯುದ್ಧ ಭೂಮಿಯ ನಕ್ಷೆ ಏನಾಗಿತ್ತು ಎಂದರೆ ಯುದ್ಧ ಭೂಮಿಯಿಂದ ಬಹಳ ದೂರದಲ್ಲಿ ಒಣ ಮತ್ತು ಬಂಜರು ಭೂಮಿಯ ಶೂನ್ಯ ಪರ್ವತದಿಂದ ಒಬ್ಬ ಶಾಂತಿಯ ಅರಸ ಪ್ರಕಟಗೊಂಡರು ಮತ್ತು ಸ್ಥಿತಿಗತಿಗಳಿಗೆ ಸಂಪೂರ್ಣ ವಿರುದ್ಧವಾಗಿ ರೋಮಿನ ವಿಜಯದ ಭವಿಷ್ಯವಾಣಿಯನ್ನು ನುಡಿಯುತ್ತಾರೆ. ನಾನು ಮುಂದೆ ಓದುವ ಆಯತ್‌ಗಳು ಮತ್ತು ಇದು ಪವಿತ್ರ ಖುರ್‌ಆನ್‌ನಲ್ಲಿ ಇದೆ. ಆದುದರಿಂದ ಭವಿಷ್ಯವಾಣಿಯ ಮಹಿಮೆ ತಿಳಿಯಲೆಂದು ಈ ವಿವರವನ್ನು ವಿವರಿಸಿದ್ದೇನೆ.

ಈ ಭವಿಷ್ಯವಾಣಿ ಯವುದಾಗಿತ್ತು ಅದರ ಬಗ್ಗೆ ನನು ಈಗಾಗಲೇ ಹೇಳಿದ್ದೇವೆ– ಅದನ್ನು ಮತ್ತೊಮ್ಮೆ ವಿವರಿಸುತ್ತೇನೆ: **ಅಲಿಫ್‌ಲಾಮ್‌ಮೀಮ್– ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ಬಲಬಿಹಿಮ್ ಸಯಗ್‌ಲಿಬೂನ– ಫೀ ಬಿಝ್‌ಇ ಸಿನೀನ; ಲಿಲ್ಲಾಹಿಲ್‌ಅಮ್ರು ಮಿನ್ ಖಬ್ಲು ಮಿಮ್ ಬಅದಿ; ವ ಯೌಮಿಝಿಂಯ್ಯಫ್ರಹುಲ್ ಮುಮಿನೂನ– ಬಿನಸ್ರಿಲ್ಲಾಹಿ. ಯನ್‌ಸುರು ಮೈಂಯಶಾಉ, ವಹುವಲ್ ಅಝೀಝುರ್‌ರಹೀಮ್– ವಅ್‌ದಲ್ಲಾಹಿ; ಲಾ ಯುಖ್ಲಿಫುಲ್ಲಾಹು ವಅ್‌ದಹೂ** (ಅರ್ರೂಮ್: 2–7) ಅಂದರೆ: ಅಲಿಫ್ ಲಾಮ್ ಮೀಮ್, ಅಂದರೆ: ನಾನು ಅಲ್ಲಾಹ್ ಸರ್ವಜ್ಞಾನಿಯಾಗಿದ್ದೇನೆ, ರೋಮನರು ಪರಾಜಿತರಾದರು. ಅತಿ ಸಮೀಪವಾದೊಂದು ದೇಶದಲ್ಲಿ. ಅವರು ತಮ್ಮ ಪರಾಭವದ ಬಳಿಕ ವಿಜಯಿಗಳಾಗುವರು. ಕೆಲವೇ ವರ್ಷಗಳಲ್ಲಿ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯವಿಶ್ವಾಸಿಗಳು ಹರ್ಷಪುಳಕಿತರಾಗುವರು. ಅಲ್ಲಾಹನ ಸಹಾಯದಿಂದ. ಅವನು ತಾನಿಚ್ಛಿಸುವವರಿಗೆ ಸಹಾಯ ಮಾಡುತ್ತಾನೆ. ಅವನು ಪ್ರತಾಪಶಾಲಿಯೂ ಕಾರುಣ್ಯವಂತನೂ ಆಗಿದ್ದಾನೆ. (ಇದು) ಅಲ್ಲಾಹನ ವಾಗ್ದಾನವಾಗಿದೆ. ಅಲ್ಲಾಹನು ತನ್ನ ವಾಗ್ದಾನವನ್ನು ಮುರಿಯಲಾರನು.ಆದರೆ ಜನರಲ್ಲಿ ಹೆಚ್ಚಿನವರು ಮನವರಿಕೆ ಮಾಡುವುದಿಲ್ಲ.

ಸ್ಥಿತಿಗತಿಗಳ ಪ್ರಕಾರ ಈ ಭವಿಷ್ಯವಾಣಿಯ ಈಡೇರಿಕೆ ಅಸಾಧ್ಯ ಮತ್ತು ನಂಬಲಾರ್ಹವಾಗಿತ್ತು. ಈ ಭವಿಷ್ಯವಾಣಿ ಈಡೇರಿದರೆ ಅನೇಕ ಒಂಟೆಗಳನ್ನು ಕೊಡುವುದಾಗಿ ಸತ್ಯನಿಷೇಧಿಗಳು ಮುಸ್ಲಿಮರೊಡನೆ ಬಾಜಿ ಕಟ್ಟಿದರು. ಈಗ ಮುಸ್ಲಿಮರಿಗೆ ಮತ್ತು ಸತ್ಯನಿಷೇಧಿಗಳಿಗೆ ಘಟನೆಗಳ ಫಲಿತಾಂಶವನ್ನು ಅರಿಯುವ ಬಹಳ ಕೌತುಕವಿತ್ತು. ಕೊನೆಗೆ ಕೆಲವು ವರ್ಷಗಳ ನಂತರ ಲೋಕವು ಪ್ರತೀಕ್ಷೆಗೆ ವಿರುದ್ಧವಾಗಿ ತಿರುಗಿತು. ರೋಮ್ ಪತನದ ಇತಿಹಾಸದ ಪ್ರಸಿದ್ಧ ಲೇಖಕ ಮತ್ತು ಇತಿಹಾಸಕಾರ, ಎಡ್ವರ್ಡ್ ಗಿಬ್ಬನ್, ಹರ್ಕಲ್‌ನ ಕಥೆಯನ್ನು ವಿವರಿಸುತ್ತಾ ಬರೆಯುತ್ತಾನೆ: "ಚಕ್ರವರ್ತಿ ತನ್ನ ಆರಂಭಿಕ ಮತ್ತು ಕೊನೆಯ ಜೀವನದಲ್ಲಿ ಮೋಜು, ಐಷಾರಮಿ ಮತ್ತು ಭ್ರಮೆಗೆ ಗುಲಾಮನಾಗಿದ್ದನು ಮತ್ತು ಪ್ರಜೆಗಳ ದುಃಖಗಳ ನಪುಂಸಕ ಗೊಂಬೆಯಂತಾಗಿದ್ದನು. ಬೆಳಿಗ್ಗೆ ಮತ್ತು ಸಂಜೆಯ ಮಬ್ಬು ಮಧ್ಯಾಹ್ನದ ಸೂರ್ಯನ ಬೆಳಕಿನಿಂದ ವಿಭಜಿಸಲ್ಪಟ್ಟಂತೆ, 621 ರಲ್ಲಿ, ಅರ್ಕಾಡಿಯಸ್‌ನ ಅರಮನೆಗಳಲ್ಲಿ, ಯುದ್ಧಭೂಮಿಯ ಸೀಸರ್ ಆದನು. ಅಂದರೆ, ಇವರು ರೋಮ್ನ ಚಕ್ರವರ್ತಿಯಾಗಿದ್ದರು ಮತ್ತು ರೋಮ್ ಮತ್ತು ಹರ್ಕಲ್‌ನ ಗೌರವವನ್ನು ಆರು ಅಭಿಯಾನಗಳ ಮೂಲಕ ಭವ್ಯವಾದ ರೀತಿಯಲ್ಲಿ ಉಳಿಸಲಾಯಿತು."

ಅವರು ನೀಡಿದ ಅರ್ಕಾಡಿಯಸ್‌ನ ಉದಾಹರಣೆಯು ರೋಮನ್ ಸಾಮ್ರಾಜ್ಯದ ರಾಜನಾಗಿದ್ದನು, ಅವನು 408 BC ಮತ್ತು 378 BC ನಡುವೆ ವಾಸಿಸುತ್ತಿದ್ದನು. ಅವನು ಮಹಾನ್ ನಾಯಕನಾಗಿದ್ದನು. ಅಂತೆಯೇ, ಸೀಸರ್ ಕೂಡ ಹಳೆಯ ಮಿಲಿಟರಿ ಜನರಲ್ ಆಗಿದ್ದನು.

ಆದಾಗ್ಯೂ, ಹರ್ಕಲ್ ತನ್ನ ಉಳಿದ ಸೈನ್ಯದೊಂದಿಗೆ ಕಾನ್ಸ್ಟಾಂಟಿನೋಪಲ್ ಅನ್ನು ತೊರೆದಾಗ, ಮಹಾನ್ ರೋಮ್ನ ಅಂತಿಮ ಸೈನ್ಯವು ಪ್ರಪಂಚದ ಮುಂದೆ ಇದೆ ಎಂದು ಜನರಿಗೆ ತಿಳಿದಿತ್ತು, ಆದರೆ ಅರೇಬಿಯಾದ ಉಮ್ಮೀ ಪ್ರವಾದಿಯ ಭವಿಷ್ಯವಾಣಿಯು ಅಕ್ಷರಶಃ ಮತ್ತು ನಿಖರವಾದ ಸಮಯದಲ್ಲಿ ನೆರವೇರಿತು. ಮುಸಲ್ಮಾನರು ಬದ್ರ್ ಮೇಲೆ ದಾಳಿ ಮಾಡಿದಾಗ ರೋಮನ್ನರು ಖುರೈಷರನ್ನು ಈ ಕ್ಷೇತ್ರದಲ್ಲಿ ಸೋಲಿಸಿದರು ಮತ್ತು ಇರಾನಿಯನ್ನರ ಮೇಲೆ ಪ್ರಾಬಲ್ಯ ಸಾಧಿಸಿದರು. ಅವರು ಪೂರ್ವದ ವಿಜಯಗಳ ನಂತರ ಒಂದರ ನಂತರ ಒಂದು ನಗರವನ್ನು ಹಿಂತೆಗೆದುಕೊಂಡರು ಮತ್ತು ಇರಾನಿಯನ್ನರನ್ನು ಬಾಸ್ಫರಸ್ ಮತ್ತು ನೈಲ್ ದಡದಿಂದ ದೂರ ತಳ್ಳಿದರು, ನಂತರ ಟೈಗ್ರಿಸ್ ಮತ್ತು ಯೂಫ್ರಟಿಸ್ ತೀರಕ್ಕೆ ತಳ್ಳಿದರು.

ಈ ಮಹಾನ್ ಭವಿಷ್ಯವಾಣಿಯ ಸತ್ಯತೆಯ ಪರಿಣಾಮವು ಜಗತ್ತನ್ನು ಬೆರಗುಗೊಳಿಸಿತು. ಈ ಸತ್ಯವನ್ನು ನೋಡಿದ ನಂತರ ಅನೇಕ ಖುರೈಶ್ ಜನರು ಮುಸ್ಲಿಮರಾದರು ಮತ್ತು ಅವ್ವರು ಈ ಭವಿಷ್ಯವನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದರು. ಈ ಅದ್ಭುತ ಭವಿಷ್ಯವಾಣಿಯ ಸತ್ಯದಿಂದ ಆಶ್ಚರ್ಯಚಕಿತನಾದ ಎಡ್ವರ್ಡ್ ಗಿಬ್ಬನ್ ಈ ಘಟನೆಯ ಹನ್ನೆರಡೂವರೆ ನೂರು ವರ್ಷಗಳ ನಂತರ ಹೇಳುತ್ತಾರೆ, "ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಪೂರ್ವದ ಎರಡು ಮಹಾನ್ ಸಾಮ್ರಾಜ್ಯಗಳ ಸಿಂಹಾಸನದ ಮೇಲೆ ಕುಳಿತು ಅವರು ಒಬ್ಬರನ್ನೊಬ್ಬರು ನಾಶಮಾಡಲು ನಿರಂತರವಾಗಿ ಹೆಚ್ಚುತ್ತಿರುವ ಪ್ರಯತ್ನಗಳ ಪ್ರಗತಿಯನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರು ಮತ್ತು ಇರಾನಿಯನ್ನರು ಯಶಸ್ಸನ್ನು ಪಡೆಯುತ್ತಿರುವ ಕ್ಷಣದಲ್ಲಿ, ಅವರು ಕೆಲವೇ ವರ್ಷಗಳಲ್ಲಿ ರೋಮನ್ ಪತಾಕೆಯ ಮೇಲೆ ವಿಜಯದ ನೆರಳು ಆವರಿಸುತ್ತದೆ ಭವಿಷ್ಯವಾಣಿ ಮಡಿದರು. ಈ ಭವಿಷ್ಯವಣಿ ನುಡಿದ ಸಮಯದಲ್ಲಿ ಯಾವುದೇ ಭವಿಷ್ಯವಾಣಿಯು ಹೆಚ್ಚು ದೂರವಿರಲು ಸಾಧ್ಯವಿರಲಿಲ್ಲ. ಹರ್ಕಲ್‌ನ ಹನ್ನೆರಡು ವರ್ಷಗಳ ಆಳ್ವಿಕೆಯು ರೋಮನ್ ಸಾಮ್ರಾಜ್ಯದ ವ್ಯವಸ್ಥೆಯು ಶೀಘ್ರದಲ್ಲೇ ಕುಸಿಯುತ್ತದೆ ಎಂದು ಘೋಷಿಸಿದ್ದರಿಂದ ಯಾರೂ ಅದನ್ನು ನಂಬಲು ಸಾಧ್ಯವಾಗಲಿಲ್ಲ."

ಹರ್ಕಲ್‌ನ ಸ್ವಭಾವದಲ್ಲಿನ ಈ ಹಠಾತ್ ಕ್ರಾಂತಿ ಮತ್ತು ಘಟನೆಗಳ ಮುಖದಲ್ಲಿ ಮತ್ತು ಅದರ ಕಾರಣಗಳ ವಿವರಣೆಯಲ್ಲಿ ಈ ಆಶ್ಚರ್ಯಕರ ಬದಲಾವಣೆಯಿಂದಾಗಿ, ರೋಮ್ ಇತಿಹಾಸದ ಲೇಖಕರು ವಿಚಿತ್ರ ವಿಚಿತ್ರವಾದ ವಿಷಯಗಳನ್ನು ರಚಿಸಿದ್ದಾರೆ, ಈ ಘೋರ ಯುದ್ಧಭೂಮಿಯಿಂದ ಬಹಳ ದೂರದಲ್ಲಿ ಒಬ್ಬ ಪ್ರವಾದಿಯ ಕೈ ರೋಮನರ ಸಹಾಯಕ್ಕಾಗಿ ಚಾಚಿತ್ತು ಎಂಬ ಸಂಗತಿ ಜನರಿಗೆ ಗೊತ್ತಿರಲಿಲ್ಲ. ಇದೇ ಈ ಪರಿವರ್ತನೆ ಮತ್ತು ಬದಲಾವಣೆಯ ಅತ್ಯಂತ ದೊಡ್ಡ ಆಧ್ಯಾತ್ಮಿಕ ಕಾರಣವಾಗಿತ್ತು. ಮುಸ್ತದ್‌ರಕ್ ಮತ್ತು ಜಾಮೀ ತಿರ್ಮಿಧಿಯಲ್ಲಿ ಹೀಗೆ ವರದಿಯಾಗಿದೆ: ರೋಮ್ ಮತ್ತು ಇರಾನಿನ ಯುದ್ಧ ಆರಂಭವಾದಾಗ ಮುಶ್ರಿಕರು ಇರಾನಿಯರ ಬೆಂಬಲಿಗರಾಗಿದ್ದರು. ಏಕೆಂದರೆ ಅವರು ಕೂಡ ಮೂರ್ತಿ ಪೂಜಕರಾಗಿದ್ದರು ಮತ್ತು ಮುಸ್ಲಿಮರು ರೋಮನರ ಬೆಂಬಲಿಗರಾಗಿದ್ದರು. ಏಕೆಂದರೆ, ಅವರು ಗ್ರಂಥಾನುಸಾರಿಗಳಾಗಿದ್ದರು. ಆ ಸಮಯದಲ್ಲಿ, ಇರಾನಿಯನ್ನರು ರೋಮ್ ಅನ್ನು ದಬ್ಬಾಳಿಕೆ ನಡೆಸುತ್ತಿದ್ದರು ಮತ್ತು ಸೂರಾ ರೂಮ್‌ನ ಭವಿಷ್ಯವಾಣಿಯು ಅವತೀರ್ಣವಾಯಿತು. ಹಝ್ರತ್ ಅಬೂಬಕರ್(ರ) ಅವರು ಈ ಭವಿಷ್ಯವಾಣಿಯನ್ನು ಎಲ್ಲಾ ಬಹುದೇವತಾವಾದಿಗಳಿಗೆ ಒತ್ತು ನೀಡುತ್ತಾ ಹೇಳಿದರು. ಈ ಭವಿಷ್ಯವಾಣಿಗಾಗಿ ಯಾವುದಾದರು ವರ್ಷವನ್ನು ನಿಗದಿಪಡಿಸಿಕೊಳ್ಳಿ ಎಂದು ಬಹುದೇವತಾವಾದಿಗಳು ಹೇಳಿದರು. ಹಝ್ರತ್ ಅಬೂಬಕರ್(ರ) ಅವರು ಐದು ವರ್ಷಗಳ ಷರತ್ತು ವಿಧಿಸಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದಾಗ, ಅವರು ಹೇಳಿದರು **ಬಿಝ್‌ಇ ಸಿನೀನ** ಎಂಬ ಎಂಬ ಪದವನ್ನು ಮೂರರಿಂದ ಒಂಬತ್ತರವರೆಗೆ ಸೂಚಿಸುತ್ತದೆ. ಆದ್ದರಿಂದ, ಹತ್ತು ವರ್ಷಕ್ಕಿಂತ ಕಡಿಮೆ ಅವಧಿಯನ್ನು ನಿಗದಿಪಡಿಸಬೇಕು. ಹೀಗೆ, ಈ ವ್ಯಾಖ್ಯಾನದ ಪ್ರಕಾರ, ಒಂಬತ್ತನೇ ವರ್ಷದಲ್ಲಿ ಬದ್ರ್ ಯುದ್ಧದ ಸಂದರ್ಭದಲ್ಲಿ, ಭವಿಷ್ಯವಾಣಿಯು ನೆರವೇರಿತು ಮತ್ತು ರೋಮನ್ನರು ವಿಜಯಶಾಲಿಯಾದರು.

ಕೆಲವು ಯುವಕರು ಮತ್ತು ಯೌವ್ವನಕ್ಕೆ ಹೆಜ್ಜೆ ಹಾಕುವ ಮಕ್ಕಳು ನನಗೆ ಪತ್ರ ಬರೆಯುತ್ತಾರೆ. ಇಸ್ಲಾಂ ಸತ್ಯಧರ್ಮವೆಂದೂ ಹಝ್ರತ್ ಪೈಗಂಬರ್(ಸ) ಸತ್ಯಪ್ರವಾದಿಯೆಂದೂ ಹೇಗೆ ತಿಳಿಯುವುದು ಎಂದು ಕೇಳುತ್ತಾರೆ. ಇಲ್ಲಿಯ ವಾತಾವರಣ ಅವರ ಮೇಲೆ ಇಂತಹ ಪ್ರಭಾವ ಬೀರಲು ಆರಂಭಿಸಿದೆ. ಅವರಿಗೆ ಇಸ್ಲಾಮಿನ ಸತ್ಯತೆಯ ಬಗ್ಗೆ ಸಂಶಯ ಉಂಟಾಗಲು ಆರಂಭವಾಗಿದೆ. ಅವರು ಅನ್ಯರ ಅನಿಸಿಕೆಗಳನ್ನು ಮತ್ತು ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳನ್ನು ನೋಡಬೇಕಾಗಿದೆ. ಈ ಭವಿಷ್ಯವಾಣಿಗಳು ಹೇಗೆ ಇಸ್ಲಾಮಿನ ಸತ್ಯತೆಯನ್ನು ಸಾಬೀತುಗೊಳಿಸುತ್ತಿದೆ ಎಂದು ಹೆತ್ತವರು ಸ್ವತಃ ಓದಬೇಕು ಮತ್ತು ಮಕ್ಕಳಿಗೂ ತೋರಿಸಬೇಕು. ಹೆತ್ತವರು ಮತ್ತು ಯುವಕರು ತಮ್ಮ ಅರಿವನ್ನು ವರ್ಧಿಸಬೇಕು.

ಪ್ರಶ್ನೆಗಳನ್ನು ಮಾತ್ರ ಕೇಳುವುದು ಸಾಕಾಗುವುದಿಲ್ಲ. ಪ್ರಶ್ನೆಗಳನ್ನು ಕೇಳಲಿದ್ದರೆ ಸ್ವತಃ ಕೂಡ ಅರಿವನ್ನು ಗಳಿಸಬೇಕು. ನಮ್ಮ ಸಂಘಟನೆಗಳು ಕೂಡ ಈ ಕುರಿತು ಜನರಿಗೆ ಅರಿವು ನೀಡಬೇಕು. ನನಗೆ ಈ ಪ್ರಶ್ನೆಯನ್ನು ಹಲವು ಬಾರಿ ಕೇಳಲಾಗಿದೆ. ಆದಾಗ್ಯೂ, ಈ ವಿವರಣೆಯು ಅಗತ್ಯವಾಗಿತ್ತು, ಆದ್ದರಿಂದ ನಾನು ಅದನ್ನು ಇಲ್ಲಿ ಉಲ್ಲೇಖಿಸಿದೆ. ಈಗ ಮುಖ್ಯ ಲೇಖನಕ್ಕೆ ಮರಳುತ್ತೇನೆ.

ಬದ್ರ್ ಯುದ್ಧವು ಹಿಜ್ರತ್‌ನ ಮೊದಲ ವರ್ಷ ಮತ್ತು ಬಿಅ್‌ಸತ್‌ನ (ಪ್ರವಾದಿತ್ವದ) ಹದಿನಾಲ್ಕನೇ ವರ್ಷದಲ್ಲಿ ನಡೆಯಿತು. ಅದಕ್ಕಿಂತ ಒಂಬತ್ತು ವರ್ಷಗಳ ಮೊದಲು, ಅದು ಪ್ರವಾದಿತ್ವದ ಐದನೇ ವರ್ಷವಾಗಿರಬಹುದು. ಈ ನಿಟ್ಟಿನಲ್ಲಿ ಭವಿಷ್ಯವಣಿಯ ಸಮಯ ಐದು ಪ್ರವದಿತ್ವದ ವರ್ಷ ಮತ್ತು ಅದರ ನೆರವೇರಿಕೆಯ ಕಾಲ ಹದಿನಾಲ್ಕು ಪ್ರವಾದಿತ್ವದ ವರ್ಷ ಅಥವಾ ಒಂದು ಹಿಜ್ರಿಯಾಗಿದೆ. ಕೆಲವರು ಈ ಭವಿಷ್ಯವಾಣಿಯ ನೆರವೇರಿಕೆಯ ಸಮಯಯವನ್ನು ಹುದೈಬಿಯಾ ಸಂಧಿಯ ವರ್ಷ, ಅಂದರೆ ಆರು ಹಿಜ್ರಿ ಎಂದು ವಿವರಿಸಿದ್ದಾರೆ. ಅದು ಸೂಕ್ತವಲ್ಲ. ಪ್ರಾಯಶಃ ಸಹೀಹ್ ಬುಖಾರಿ ಇತ್ಯಾದಿಗಳಲ್ಲಿ ಪ್ರವಾದಿಯವರ ಸಂದೇಶವಾಹಕನು ಇಸ್ಲಾಮಿನ ಆಹ್ವಾನದೊಂದಿಗೆ ಖೈಸರ್ ಬಳಿಗೆ ಹೋದಾಗ, ಆ ಸಂದರ್ಭದಲ್ಲಿ ಆತನು ವಿಜಯಕ್ಕಾಗಿ ಧನ್ಯವಾದವನ್ನು ಅರ್ಪಿಸಲು ಸೀರಿಯಾಕ್ಕೆ ಬಂದಿದ್ದನು ಹೀಗೆ ಸಂದೇಶವಾಹಕನು ಹುದೈಬಿಯಾ ಸಂಧಿಯ ಕಾಲದಲ್ಲಿ ಹೊರಟಿರಬಹುದು ಎಂದು ತಿಳಿದುಬರುತ್ತದೆ. ಆದ್ದರಿಂದ ಜನರು ಇದನ್ನು ವಿಜಯದ ಇತಿಹಾಸ ಎಂದು ಭಾವಿಸಿದ್ದರು, ಆದರೆ ಇದು ಸುಳ್ಳಾಗಿದೆ ಮತ್ತು ಇದು ವಿಜಯದ ಇತಿಹಾಸವಲ್ಲ ಬದಲಿಗೆ ವಿಜಯದ ಆಚರಣೆಯ ಇತಿಹಾಸ ಎಂಬುದು ಸ್ಪಷ್ಟವಾಗಿದೆ.

ಆ ಸಮಯದಲ್ಲಿ ಅವರು ವಿಜಯವನ್ನು ಆಚರಿಸಲು ಬಂದಿದ್ದರು. ಆದಾಗ್ಯೂ, ಚರಿತ್ರೆಯ ಪ್ರಕಾರ 609 ಇಸವಿಯಲ್ಲಿ ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತಗೊಂಡರು ಎಂದು ಸಾಬೀತಾಗಿದೆ. 610 ಇಸವಿಯಲ್ಲಿ ರೋಮ್ ಮತ್ತು ಇರಾನಿಯರ ಜಗಳ ಆರಂಭವಾಯಿತು. 613 ಇಸವಿಯಲ್ಲಿ ಯುದ್ಧದ ಘೋಷಣೆಯಾಯಿತು. 614 ಇಸವಿಯಲ್ಲಿ ರೋಮನರ ಸೋಲಿನ ಆರಂಭವಾಯಿತು. 616 ಇಸವಿಯಲ್ಲಿ ರೋಮ್ ಪೂರ್ಣವಾಗಿ ಪರಾಜಿತಗೊಂಡಿತು. 622 ಇಸವಿಯಲ್ಲಿ ರೋಮನರು ಪುನಃ ದಾಳಿ ಆರಂಭಿಸಿದರು. ಕ್ರಿ.ಶ. 623ರಲ್ಲಿ ಅವರ ವಿಜಯದ ಆರಂಭವಾಯಿತು. 625 ಇಸವಿಯಲ್ಲಿ ಅವರು ಪೂರ್ಣವಾಗಿ ಜಯ ಗಳಿಸಿದರು. ಈ ಕ್ರಮ ಪ್ರಕಾರ ನೋಡುವುದಾದರೆ, ಈ ಭವಿಷ್ಯವಾಣಿಯ ಶ್ರೇಷ್ಠತೆ ಏನೆಂದರೆ, ಸೋಲಿನ ಆರಂಭದಿಂದ ವಿಜಯದ ಆರಂಭದ ತನಕದ ವರ್ಷಗಳನ್ನು ಜೋಡಿಸಿದರೆ ಒಂಬತ್ತು ವರ್ಷಗಳಾಗುತ್ತವೆ. ಸೋಲಿನ ಕೊನೆಯಿಂದ ವಿಜಯದ ಕೊನೆಯ ವರೆಗೆ ಇರುವ ವರ್ಷಗಳನ್ನು ಜೋಡಿಸಿದರೆ ಅದು ಕೂಡ ಒಂಬತ್ತು ವರ್ಷಗಳಾಗುತ್ತವೆ.

ಈ ವಿಜಯದ ನಂತರ ಹೆರಾಕ್ಲಿಯಸ್ ಹಿಂದಿನಂತೆ ಸೋಮಾರಿ ಮತ್ತು ಆರಾಮಪ್ರಿಯ ಅರಸನಾದನು. ದೈವಿಕ ಶಕ್ತಿ ಕೆಲವು ವರ್ಷಗಳಿಗಾಗಿ ಆತನ ಮೆದುಳನ್ನು ಎಚ್ಚರಗೊಳಿಸಿತು ಮತ್ತು ಭವಿಷ್ಯವಾಣಿಯ ನಂತರ ಐಷಾರಾಮಿ ಮತ್ತು ಅಸಡ್ಡೆಯ ಹಾಸಿಗೆಯಲ್ಲಿ ಆತನನ್ನು ಮಲಗಿಸಲಾಯಿತು.

(ಸೀರತ್ ಖಾತಮನ್ನಬೀಈನ್, ಅಲ್ಲಾಮ ಶಿಬಿಲಿ ನುಮಾನಿ, ಸಂಪುಟ–2 ಭಾಗ–3, ಪುಟ–313–316, ಇದರ ಇಸ್ಲಮಿಯಾತ್ ಸೆಪ್ಟೆಂಬರ್ 2002) (ಇನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾ, ಸಂಪುಟ–2, ಪುಟ–341) (ಇನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾ, ಸಂಪುಟ–4, ಪುಟ–938)

ಇದೆಲ್ಲವನ್ನೂ ಅಲ್ಲಮ ಶಿಬ್ಲಿ ನೌಮಾನಿಯವರು ತಮ್ಮ ಇತಿಹಾಸದಲ್ಲಿ ಬರೆದಿದ್ದಾರೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ರೋಮನ್ನರ ವಿಜಯದ ಬಗ್ಗೆ ಕೆಲವು ಸ್ಥಳಗಳಲ್ಲಿ ಇತಿಹಾಸದ ವ್ಯತ್ಯಾಸವನ್ನು ಈ ರೀತಿ ಪರಿಹರಿಸಿದ್ದಾರೆ: "ಕೆಲವು ವರದಿಗಳಲ್ಲಿ, ಹುದೈಬಿಯಾ ಸಂಧಾನದ ಸಮಯದಲ್ಲಿ ರೋಮ್ ವಿಜಯವನ್ನು ಸಾಧಿಸಲಾಯಿತು ಎಂದು ಉಲ್ಲೇಖಿಸಲಾಗಿದೆ, ಆದರೆ ಈ ಎರಡೂ ವರದಿಗಳು ಅವು ವಿರೋಧಾತ್ಮಕವಾಗಿಲ್ಲ ಏಕೆಂದರೆ ವಾಸ್ತವವಾಗಿ ರೋಮ್ ವಿಜಯವು ಬದ್ರ್ ಯುದ್ಧದ ಸಮಯದಿಂದ ಹುದೈಬಿಯಾ ಸಂಧಾನದ ಸಮಯದವರೆಗೆ ಹರಡಿತು." (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಹಿಬ್ ಎಂ.ಎ(ರ), ಪುಟ–377)

ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಈ ಬಗ್ಗೆ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ರವರು ಇನ್ನೂ ಮಕ್ಕಾದಲ್ಲೇ ಇದ್ದರು ಆಗ ಇರಾನಿಯನ್ನರು ರೋಮನ್ನರನ್ನು ಸೋಲಿಸಿದರು ಎಂಬ ಸುದ್ದಿ ಅರೇಬಿಯಾದಲ್ಲಿ ಹರಡಿತು. ಅದಕ್ಕೆ ಮಕ್ಕಾದವರು ನಾವು ಬಹುದೇವತಾವಾದಿಗಳಾಗಿದ್ದೇವೆ ಮತ್ತು ಇರಾನಿಯನ್ನರೂ ಸಹ ಬಹುದೇವತಾವಾದಿಗಳಾಗಿದ್ದಾರೆ ಎಂದು ಬಹಳ ಸಂತೋಷಪಟ್ಟರು. ಇರಾನಿಯನ್ನರು ರೋಮನ್ನರನ್ನು ಸೋಲಿಸುವುದು ಒಳ್ಳೆಯ ಶಕುನವಾಗಿದೆ ಮತ್ತು ಇದರರ್ಥ ಮಕ್ಕಾದ ಜನರು ಪ್ರವಾದಿ ಮುಹಮ್ಮದ್(ಸ) ಅವರನ್ನು ಸಹ ಸೋಲಿಸುತ್ತಾರೆ, ಆದರೆ ಅಲ್ಲಾಹನು ಪ್ರವಾದಿ ಮುಹಮ್ಮದ್(ಸ) ಅವರಿಗೆ **ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ವಲಬಿಹಿಮ್ ಸಯಗ್‌ಲಿಬೂನ– ಫೀ ಬಿಝ್‌ಇ ಸಿನೀನ** (ಅರ್ರೂಮ್: 2–5) ಅಂದರೆ: ಅಲಿಫ್ ಲಾಮ್ ಮೀಮ್, ರೋಮನರು ಪರಜಿತರಾದರು– ಅತಿ ಸಮಿಪವಾದೊಂದು ದೇಶದಲ್ಲಿ. ಅವರು ತಮ್ಮ ಪರಭವದ ಬಳಿಕ ವಿಜಯಿಗಳಾಗುವರು. ರೋಮನ್ ಆಡಳಿತವು ನಿಜವಾಗಿಯೂ ಸಿರಿಯನ್ ಪ್ರದೇಶದಲ್ಲಿ ಸೋಲಿಸಲ್ಪಟ್ಟಿದೆ, ಆದರೆ ಈ ಸೋಲನ್ನು ಸಂಪೂರ್ಣವಾಗಿ

ಪರಿಗಣಿಸಬೇಡಿ. ಸೋತ ನಂತರ, ರೋಮನ್ನರು 9 ವರ್ಷಗಳಲ್ಲಿ ಮತ್ತೆ ವಿಜಯಶಾಲಿಯಾಗುತ್ತಾರೆ. ಈ ಭವಿಷ್ಯವಾಣಿ ಪ್ರಕಟವಾದಾಗ ಮಕ್ಕಾದ ಜನರು ಹಝ್ರತ್ ಅಬೂಬಕ್ಕರ್(ರ) ರವರ ಜೊತೆ ಕೆಲವು ಸತ್ಯನಿಷೇಧಿಗಳು ನೂರು ಒಂಟೆಗಳಿಗೆ ಬಾಜಿ ಕಟ್ಟಿದರು. ಮತ್ತು ಅವರನ್ನು ವ್ಯಂಗ್ಯ ಮಾಡುತ್ತಾ ಜೋರಾಗಿ ನಗುತ್ತಾ ಹೀಗೆ ಹೇಳತ್ತಿದ್ದರು, ಈ ಸೋಲಿನ ನಂತರವು ರೋಮನ್ನರು ಮತ್ತೆ ಅಭಿವೃದ್ಧಿ ಹೊಂದಿದರೆ ನಾವು ನಿಮ್ಮನ್ನು ನೂರು ಒಂಟೆಗಳನ್ನು ನೀಡುತ್ತೇವೆ ಆದರೆ ಹೀಗೆ ಸಂಭವಿಸದಿದ್ದರೆ ನೀವು ನಮಗೆ ನೂರು ಒಂಡೆಗಳನ್ನು ನೀಡಬೇಕು. ಮೇಲುನೋಟಕ್ಕೆ, ಈ ಭವಿಷ್ಯವಾಣಿಯ ನೆರವೇರಿಕೆಯ ಸಾಧ್ಯತೆಯು ಹೆಚ್ಚು ಹೆಚ್ಚು ದೂರವಾಗುತ್ತಿತ್ತು. ಸಿರಿಯಾದ ಸೋಲಿನ ನಂತರ, ಪರ್ಷಿಯನ್ ಸೈನ್ಯದವರೆಗೆ ಹಲವಾರು ಸೋಲುಗಳನ್ನು ಅನುಭವಿಸಿದ ನಂತರ ಇರಾನ್‌ನ ಸೈನ್ಯಗಳು ಮರ್ಮರ ಸಮುದ್ರದ ದಡಕ್ಕೆ ಬಂದು ತಲುಪಿತು. ಖಸ್ತಂತೇನಿಯಾವು ತಮ್ಮ ಏಷಯಾದ ರಷ್ಟ್ರಗಳಿಂದ ಕಡಿಯಲ್ಪಟ್ಟಿತು ಮತ್ತು ರೋಮನ್ ಸೈನ್ಯವು ಒಂದು ಉತ್ತಮ ರಾಷ್ಟ್ರವನ್ನಾಗಿ ಉಳಿದುಕೊಂಡಿತು ಆದರೆ ದೈವವಾಕ್ಯವು ನೆರವೇರಬೇಕಾಗಿತ್ತು ಅದು ನೆರವೇರಿತು.

ತೀವ್ರ ಹತಾಶೆಯ ಸ್ಥಿತಿಯಲ್ಲಿ, ರೋಮ್‌ನ ಚಕ್ರವರ್ತಿಯು ತನ್ನ ಸೈನಿಕರೊಂದಿಗೆ ಅಂತಿಮ ದಾಳಿಗಾಗಿ ಕಾನ್ಸ್ಟಾಂಟಿನೋಪಲ್ ಅನ್ನು ತೊರೆದು ಏಷ್ಯಾದ ಕರಾವಳಿಯಲ್ಲಿ ಇಳಿದು ಇರಾನಿಯನ್ನರೊಂದಿಗೆ ನಿರ್ಣಾಯಕ ಯುದ್ಧವನ್ನು ನಡೆಸಿದನು. ರೋಮನ್ ಸೈನಿಕರು, ಸಂಖ್ಯೆ ಮತ್ತು ಉಪಕರಣಗಳಲ್ಲಿ ಕಡಿಮೆ ಇದ್ದರೂ, ಪವಿತ್ರ ಖುರ್‌ಆನ್‌ನ ಭವಿಷ್ಯವಾಣಿಯ ಪ್ರಕಾರ ಇರಾನಿಯನ್ನರ ಮೇಲೆ ಮೇಲುಗೈ ಸಾಧಿಸಿದರು. ಇರಾನ್‌ನ ಗಡಿಯ ನಂತರ ತನ್ನ ಕಾಲು ಎಲ್ಲಿಯೂ ನಿಲ್ಲದ ರೀತಿಯಲ್ಲಿ ಇರಾನ್ ಸೈನ್ಯವು ಓಡಿಹೋಯಿತು ಮತ್ತು ನಂತರ ಪುನಃ ರೋಮನ್ ಸರ್ಕಾರದ ಆಫ್ರಿಕನ್ ಮತ್ತು ಏಷ್ಯಾದ ವಿಜಯಶಾಲಿ ರಾಷ್ಟ್ರಗಳು ಅವರ ನಿಯಂತ್ರಣಕ್ಕೆ ಬಂದವು. (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–445)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಬು ಬಕರ್ ಸಿದ್ದೀಕ್(ರ) ಅಬು ಜಹ್ಲೊಂದಿಗೆ ಬಾಜಿ ಕಟ್ಟಿದಾಗ ಮತ್ತು ಪವಿತ್ರ ಖುರ್‌ಅನ್‌ನ ಆ ಭವಿಷ್ಯವಾಣಿಯನ್ನು ಷರತ್ತಗಿ ಇರಿಸಿದರು ಅಂದರೆ **ಅಲಿಫ್‌ಲಾಮ್‌ಮೀಮ್– ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ಲಲಬಿಹಿಮ್ ಸಯಗ್‌ಲಿಬೂನ– ಫೀ ಬಿಝ್‌ಇ ಸಿನೀನ** (ಅರ್ರೂಮ್: 2–5) ಅಂದರೆ: ಅಲಿಫ್ ಲಾಮ್ ಮೀಮ್, ರೋಮನರು ಪರಜಿತರಾದರು– ಅತಿ ಸಮಿಪವಾದೊಂದು ದೇಶದಲ್ಲಿ. ಅವರು ತಮ್ಮ ಪರಭವದ ಬಳಿಕ ವಿಜಯಿಗಳಾಗುವರು. ಕೆಲವೇ ವರ್ಷಗಳಲ್ಲಿ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯ ವಿಶ್ವಾಸಿಗಳು ಹರ್ಷಪುಳಕಿತರಾಗುವರು. ಮತ್ತು ಅದಕ್ಕೆ ಮೂರು ವರ್ಷಗಳ ಅವಧಿಯನ್ನು ನಿಗದಿಪಡಿಸಲಾದಾಗ, ಹಝ್ರತ್ ಪೈಗಂಬರ್(ಸ) ಅವರು ಭವಿಷ್ಯವಾಣಿಯ ಸ್ಥಿತಿಯನ್ನು ನೋಡಿ ತಕ್ಷಣವೇ ತಮ್ಮ ದೂರದೃಷ್ಟಿಯನ್ನು ಕಾರ್ಯರೂಪಕ್ಕೆ ತಂದರು ಮತ್ತು ಅಬು ಬಕರ್ ಸಿದ್ದಿಕ್(ರ) ಅವರನ್ನು ಸ್ವಲ್ಪ ಮಟ್ಟಿಗೆ ಮಾರ್ಪಡಿಸಲು ಆದೇಶಿಸಿದರು. ಮತ್ತು **ಬಿಝ್‌ಇ ಸಿನೀನ** ಎಂಬ ಪದವು ಸಾಮಾನ್ಯವಾಗಿದೆ ಮತ್ತು ಸಾಮಾನ್ಯವಾಗಿ ಒಂಬತ್ತು ವರ್ಷಗಳವರೆಗೆ ಅನ್ವಯಿಸುತ್ತದೆ ಎಂದು ಹೇಳಿದರು." (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–310–311)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತಷ್ಟು ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ಅವರ ಸಮಯದಲ್ಲಿ, ಇರಾನ್ ಜನರು ಬಹುದೇವತಾವಾದಿಗಳಾಗಿದ್ದರು ಮತ್ತು ಕ್ರಿಶ್ಚಿಯನ್ ಆಗಿದ್ದ ರೋಮ್ನ ಸೀಸರ್ ವಾಸ್ತವವಾಗಿ ಏಕದೇವತಾವಾದಿಯಾಗಿದ್ದನು" ಮತ್ತು ಇದು ಕೂಡ ಮುಸ್ಲಿಮರ ಸಭೆಗೆ ಒಂದು ಕಾರಣ. ಕ್ರಿಶ್ಚಿಯನ್ ಆಗಿದ್ದ ಸೀಸರ್ ರೋಮ್ ನಿಜವಾಗಿಯೂ ಏಕದೇವತಾವಾದಿಯಗಿದ್ದನು. ಈಸಾ ಮಸೀಹರನ್ನು ಅಲ್ಲಾಹನ ಪುತ್ರನೆಂದು ನಂಬಲಿಲ್ಲ ಮತ್ತು ಖುರ್‌ಆನ್‌ನಲ್ಲಿ ದಾಖಲಾಗಿರುವ ಕ್ರಿಸ್ತನ ಉಲ್ಲೇಖವನ್ನು ಅವನಿಗೆ ಪ್ರಸ್ತುತಪಡಿಸಿದಾಗ ಅವನು ಹೇಳಿದನು: "ನನಗೆ ಕ್ರಿಸ್ತನ ಸ್ಥಾನವು ಪವಿತ್ರ ಖುರ್‌ಆನ್ ಹೇಳಿದಕ್ಕಿಂದ ಒಂದು ತುಣುಕೂ ಹೆಚ್ಚಾಗಿಲ್ಲ. ಹದೀಸ್‌ನಲ್ಲಿ, ಬುಖಾರಿಯಲ್ಲಿ ಅದರ ಸಾಕ್ಷ್ಯವೂ ಇದೆ, ಇದು ಟೋರಾದಲ್ಲಿರುವ ಪದ ಮತ್ತು ಅದರ ಸ್ಥಾನಮಾನವು ಪ್ರವಾದಿತ್ವಕ್ಕಿಂತ ಹೆಚ್ಚಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ. ಇದರ ಮೇಲೆ, ಈ ಆಯತ್ ಅವತೀರ್ಣಗೊಂಡಿತು: **ಅಲಿಫ್‌ಲಾಮ್‌ಮೀಮ್– ಗುಲುಬತಿರ್ರೂಮು. ಫೀ ಅದ್ನಲ್ ಅರ್ಝಿ ವಹುಮ್ ಮಿಮ್ ಬಅ್‌ದಿ ಗ್ಲಲಬಿಹಿಮ್ ಸಯಗ್‌ಲಿಬೂನ– ಫೀ ಬಿಝ್‌ಇ ಸಿನೀನ** (ಅರ್ರೂಮ್: 2–5) ಅಂದರೆ: ಅಲಿಫ್ ಲಾಮ್ ಮೀಮ್, ರೋಮನರು ಪರಜಿತರಾದರು– ಅತಿ ಸಮಿಪವಾದೊಂದು ದೇಶದಲ್ಲಿ. ಅವರು ತಮ್ಮ ಪರಭವದ ಬಳಿಕ ವಿಜಯಿಗಳಾಗುವರು. ಕೆಲವೇ ವರ್ಷಗಳಲ್ಲಿ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯ ವಿಶ್ವಾಸಿಗಳು ಹರ್ಷಪುಳಕಿತರಾಗುವರು. ಎಂದರೆ ರೋಮ್ ಈಗ ಸೋಲಿಸಲ್ಪಟ್ಟಿದೆ, ಆದರೆ ಸ್ವಲ್ಪ ಸಮಯದಲ್ಲಿ (9 ವರ್ಷಗಳಲ್ಲಿ) ಅದು ಮತ್ತೆ ಮೇಲುಗೈ ಸಾಧಿಸುತ್ತದೆ. ಹಝ್ರತ್ ಪೈಗಂಬರ್(ಸ) ಅವರು ಎರಡೂ ಶಕ್ತಿಗಳನ್ನು ಅಂದಾಜು ಮಾಡಿದ್ದರು ಮತ್ತು ನಂತರ ಮುಂಜಾಗ್ರತೆಯಿಂದ ಇದನ್ನು ಭವಿಷ್ಯ ನುಡಿದಿದ್ದಾರೆ ಎಂದು ಕ್ರಿಶ್ಚಿಯನ್ನರು ಚೇಷ್ಟೆಯಿಂದ ಹೇಳುತ್ತಾರೆ. ಅದಕ್ಕೆ ನಾವು ಹೇಳುತ್ತೇವೆ, ಅದೇ ರೀತಿಯಲ್ಲಿ, ಈಸಾ ಮಸೀಹರು ರೋಗಿಗಳನ್ನು ನೋಡಿ ನಿರ್ಣಯಿಸುತ್ತಿದ್ದರು, ಮತ್ತು ಯಾರು ಗುಣಕಾರಿಯಾಗಬಹುದು ತೋರುತ್ತಿತ್ತು ಅವರನ್ನು ಗುಣಪಡಿಸುತ್ತಿದ್ದರು ಎಂದು. "ಹೀಗೆ ಅವರ ಪವಾಡಗಳೆಲ್ಲವೂ ಅವರ ಕೈಯಿಂದ ಹೋಗುತ್ತಿದ್ದವು. **ಯೌಮಿಝಿನ್ ಯಫ್ರಹುಲ್ ಮುಮಿನೂನ** ಈ ದಿನ, ವಿಶ್ವಾಸಿಗಳಿಗೆ ಎರಡು ಸಂತೋಷಗಳು ಇರುತ್ತವೆ, ಒಂದು ಬದ್ರ್ ಯುದ್ಧದ ವಿಜಯ ಮತ್ತು ಇನ್ನೊಂದು ರೋಮ್ನ ಭವಿಷ್ಯವಾಣಿಯ ನೆರವೇರಿಕೆ."

(ಮಲ್‌ಫೂಝಾತ್, ಸಂಪುಟ–3, ಪುಟ–298–299, 2022 ಆವೃತಿ)

ಯುದ್ಧ ಕಂಡಿತು ಎಂದು ಆಕ್ಷೇಪಿಸಿದರೆ ಬದ್ರ್ ಯುದ್ಧದಲ್ಲಿ ಪರಿಸ್ಥಿತಿ ಹಾಗಿರಲಿಲ್ಲ. ಅವರ ಗೆಲುವಿನ ಶುಭ ಸುದ್ದಿಯೂ ಇತ್ತು ಮತ್ತು ಈ ಎರಡು ಶುಭ ಸುದ್ದಿಗಳು ಒಟ್ಟಿಗೆ ಕಂಡು ಬಂದವು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯೋಚಿಸಿ ನೋಡಿರಿ, ಇದು ಎಷ್ಟು ಅದ್ಭುತಕರ ಮತ್ತು ಮಹತ್ತಾದ ಭವಿಷ್ಯವಾಣಿಯಾಗಿದೆ. ಮುಸ್ಲಿಮರ ದುರ್ಬಲ ಮತ್ತು ಬಲಹೀನ ಸ್ಥಿತಿ ಸ್ವತಃ ಅಪಾಯದಲ್ಲಿದ್ದ ಸಮಯದಲ್ಲಿ ಈ ಭವಿಷ್ಯವಾಣಿಯನ್ನು ನುಡಿಯಲಾಗಿತ್ತು. ಯಾವುದೇ ಸಾಮಾನು ಮತ್ತು ಶಕ್ತಿ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ವಿರೋಧಿಗಳು ಹೀಗೆ ಹೇಳುತ್ತಿದ್ದರು: ಈ ಸಂಘ ಬೇಗನೇ ನಾಶವಾಗುವುದು. ಕಾಲಾವಧಿಯನ್ನು ಕೂಡ ನಿರ್ಣಯಿಸಲಾಯಿತು. ಅನಂತರ ಆ ದಿನದಂದು ಸತ್ಯವಿಶ್ವಾಸಿಗಳು ಸಂತೋಷಗೊಳ್ಳುವರು ಎಂದು ಹೇಳಿಕೊಂಡು ಎರಡು ಭವಿಷ್ಯವಾಣಿಗಳನ್ನು ಮಾಡಲಾಯಿತು. ಎಂದರೆ, ಆ ದಿನದಂದು ರೋಮನರು ಇರಾನಿಯರ ಮೇಲೆ ವಿಜಯ ಸಾಧಿಸುವರು ಮತ್ತು ಅದೇ ದಿನದಂದು ಮುಸ್ಲಿಮರು ಕೂಡ ಯಶಸ್ಸು ಗಳಿಸಿ ಸಂತೋಷಗೊಳ್ಳುವರು ಎಂದು ನುಡಿಯಲಾಯಿತು. ಹೀಗೆ ಭವಿಷ್ಯ ನುಡಿಯಲಾದಂತೆ ಬದ್ರ್ ದಿನದಂದು ಈ ಭವಿಷ್ಯವಾಣಿ ಈಡೇರಿತು. ಒಂದೆಡೆ ರೋಮನರು ಜಯ ಗಳಿಸಿದರು ಮತ್ತೊಂದೆಡೆ ಮುಸ್ಲಿಮರು ವಿಜಯಿಯಾದರು." (ಮಲ್‌ಫೂಝಾತ್, ಸಂಪುಟ–2, ಪುಟ–387, 2022 ಆವೃತಿ)

ಈ ಪರಂಪರೆ ಮುಂದುವರೆಯುವುದು. ಈ ಘಟನೆಗಳು ಹಝ್ರತ್ ಪಯಗಂಬರ್(ಸ) ಅವರಿಗೆ ಸಂಬಂಧಿಸಿವೆ. ಉಳಿದವುಗಳನ್ನು ನಾನು ನಂತರ ವಿವರಿಸುತ್ತೇನೆ, ಇನ್‌ಶಾಅಲ್ಲಾಹ್. ನಮಾಝ್ ನಂತರ, ನಾನು ಮುಕರಮ್ ಫಿರಾಸ್ ಅಲಿ ಅಬ್ದುಲ್ ವಾಹಿದ್ ಸಾಹಿಬ್ (ಯುಕೆ) ಅವರ ನಮಾಝೆ ಜನಾಝ ಗ್ಹಾಯಿಬ್ ಅನ್ನು ನಿರ್ವಹಿಸುವೆನು. ಅವರು ನಲವತ್ತೇಳು ವರ್ಷ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇರಾಕ್ ಮೂಲದ ಇವರು 2012 ರಲ್ಲಿ ಬೈಅತ್ ಮಾಡುವ ಮೂಲಕ ಜಮಾಅತ್ ಸೇರಿದರು. ಅವರು ಪತ್ನಿ ಮತ್ತು ಮಗಳನ್ನು ಅಗಲಿದ್ದಾರೆ. ಅವರು ಪವಿತ್ರ ಖುರ್‌ಆನ್ ಅನ್ನು ಸಹ ಕಂಠಪಾಠ ಮಾಡಿದ್ದರು. ಬಾಲ್ಯದಲ್ಲಿಯೇ ಕಂಠಪಾಠ ಮಡಿದ್ದರು. ಅವರು ಬೆಳೆದ ನಂತರ, ಅವರು ಬಹಳ ಹಿಂಸಾತ್ಮಕ ಧಾರ್ಮಿಕ ಮಾರ್ಗವನ್ನು ಅನುಸರಿಸಿದರು ಕರುವಾದ ಹಿಂಸತ್ಮಕ ಮಸ್ಲಿಮರಾಗಿದ್ದರು. ವೀಕ್ಷಿಸಲು ನಿಷಿದ್ಧವಾಗಿದೆ ಎಂದು ಮನೆಯ ಟಿವಿಯನ್ನೂ ಸಹ ಮಾರಾಟ ಮಾಡಿದ್ದರು. ಮನೆಯ ಎಲ್ಲಾ ಚಿತ್ರಗಳನ್ನು ಸಹ ನಿಷೇಧಿಸಲಾಗಿದೆ ಎಂದು ಕಿತ್ತುಹಾಕಿದ್ದರು. ಅವರು ಉತ್ತಮ ಕಲಾವಿದರಾಗಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ಮೌಲವಿಯ ತರಬೇತಿಯಲ್ಲಿದ್ದಾಗ ಅವರ ಮೂಲಕ ಧರ್ಮದ ಜ್ಞಾನವನ್ನು ಪಡೆದಾಗ, ಅವರು ಸಂಪೂರ್ಣವಾಗಿ ಧರ್ಮಾಂಧರಾದರು ಮತ್ತು ಎಲ್ಲಾ ರೀತಿಯ ಚಿತ್ರಗಳನ್ನು ಮಾಡುವುದರಿಂದ ದೂರವಿದ್ದರು. ಆದರೆ ನಾನು ಸರಿಯಾಗಿದ್ದೇನೆಯೋ ಇಲ್ಲವೋ ಎಂದು ಗೊತ್ತಿಲ್ಲ ಎಂಬ ಅನುಮಾನ ಅವರ ಮನದಲ್ಲಿ ಮೂಡಿತ್ತು. ಇಸ್ಲಾಂ ಧರ್ಮ ಸತ್ಯವೋ ಅಲ್ಲವೋ? ಒಬ್ಬ ಕ್ರಿಶ್ಚಿಯನ್ ಸಹಪಾಠಿ ಅವನ ಸ್ನೇಹಿತನಾಗಿದ್ದನು. ಸ್ವಲ್ಪ ಸಮಯದ ನಂತರ ಅವರು ಅವನಿಂದ ಪ್ರಭಾವಿತರಾದರು ಮತ್ತು ಇಸ್ಲಾಂ ಧರ್ಮದ ಬಗ್ಗೆ ಅವರ ಅನುಮಾನಗಳಿಗೆ ಮತ್ತು ಪ್ರಶ್ನೆಗಳಿಗೆ ಉತ್ತರವನ್ನು ಪಡೆಯದ ಕಾರಣ, ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಕೊಂಡರು. ನಂತರ ಸ್ವಲ್ಪ ಸಮಯದ ನಂತರ, ಹಝ್ರತ್ ಪೈಗಂಬರ್(ಸ) ಅವರ ಪ್ರೀತಿಯು ಪುನರುಜ್ಜೀವನಗೊಂಡಿತು ಮತ್ತು ಅವರು ಮತ್ತೆ ಇಸ್ಲಾಂ ಧರ್ಮವನ್ನು

ಸ್ವೀಕರಿಸಿದರು. ಆದಾಗ್ಯೂ, ಅವರು ಉತ್ತಮ ಶ್ರಮಜೀವಿಗಳು ಮತ್ತು ಓದುಗರಾಗಿದ್ದರು. ಅವರು ಬಾಸ್ರಾ ವಿಶ್ವವಿದ್ಯಾಲಯದಿಂದ ಪದವಿ ಪಡೆದರು. ಅಲ್ಲಿಯ ಕಾಲೇಜ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಅಂಡ್ ಎಕನಾಮಿಕ್ಸ್ ನಲ್ಲಿ ಅಧ್ಯಾಯನ ಮಡಿದರು. ಅವರು ಭಾಷೆಗಳನ್ನು ಕಲಿಯಲು ಇಷ್ಟಪಡುತ್ತಿದ್ದರು. ಆದ್ದರಿಂದ ಅವರು ಉತ್ತಮ ಇಂಗ್ಲಿಷ್ ಭಾಷೆಯನ್ನು ಕಲಿತರು. ಅವರು ಫ್ರೆಂಚ್, ಸ್ಪಾನಿಷ್, ಜರ್ಮನ್ ಮತ್ತು ಸ್ವಲ್ಪ ಮಟ್ಟಿಗೆ ರಷ್ಯನ್ ಭಾಷೆಯನ್ನೂ ಕಲಿತರು. 2009 ರಲ್ಲಿ, ಅವರು ಇಲ್ಲಿ ತಮ್ಮ ಪತ್ನಿಯೊಂದಿಗೆ ಯುಕೆಗೆ ಸ್ಥಳಾಂತರಗೊಂಡರು, ನಂತರ ಅಲ್ಲಾಹನು ಅವರಿಗೆ ಇಲ್ಲಿ ಪುತ್ರಿಯನ್ನು ದಯಪಾಲಿಸಿದನು. ಯುಕೆಗೆ ಬಂದ ನಂತರ, ಫಿರಾಸ್ ಸಾಹಿಬ್ ಅವರು ಎಂ.ಟಿ.ಎ ಅಲ್ ಅರೇಬಿಯಾ ವನ್ನು ಆಕಸ್ಮಿಕವಾಗಿ ನೋಡಿದರು ಮತ್ತು ಅವರ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲು ಪ್ರಾರಂಭಿಸಿದರು. ಅಂತಿಮವಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯಾಸತ್ಯತೆ ಅವರ ಹೃದಯದಲ್ಲಿ ಎಷ್ಟು ಆಳವಾಯಿತು ಎಂದರೆ ಅವರು ಹಝ್ರತ್ ಪೈಗಂಬರ್(ಸ) ರನ್ನು ಸ್ತುತಿಸಿ ಬರೆದ ಕವನಗಳನ್ನು ಆಗಾಗ್ಗೆ ಗುನುಗುತ್ತಿದ್ದರು. ಅದೇ ಸಮಯದಲ್ಲಿ, ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರವರನ್ನು ಕನಸಿನಲ್ಲಿ ನೋಡಿದರು, ಅವರು ದೊಡ್ಡ ಬಿಳಿ ಮಸೀದಿಯಲ್ಲಿ ಭಾಷಣ ಮಾಡುತ್ತಿದ್ದಾರೆ ಮತ್ತು ಅವರ ಅನುಗ್ರಹದಯಕ ಮುಖದಿಂದ ಪ್ರಕಾಶವು ಹೊರಬರುತ್ತಿದೆ. ನಂತರ, ಒಬ್ಬ ಸುಂದರ ಯುವಕನನ್ನು ನೋಡಿದರು, ಆತನು ಒಬ್ಬ ಸುದ್ದಿ ವರದಿಗಾರನಂತೆ, ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಮೈಕ್ರೊಫೋನ್‌ನಲ್ಲಿ ಅತ್ಯಂತ ಸುಂದರವಾದ ಹೆಸರುಗಳಿಂದ ಕರೆಯುತ್ತಿದ್ದನು, ಜನರನ್ನು ಅವರನ್ನು ಅನುಸರಿಸಲು ಪ್ರೋತ್ಸಾಹಿಸುತ್ತಿದ್ದನು. ಅಂತಿಮವಾಗಿ, ಅವರು ಈ ಆಧಾರದ ಮೇಲೆ 2012 ರಲ್ಲಿ ಬೈಅತ್ ಮಾಡಿದರು. ಅವರು ಶೆಫೀಲ್ಡ್ ನ ಡಾ.ಬಿಲಾಲ್ ತಾಹಿರ್ ಸಾಹಿಬ್ ಅವರನ್ನು ಸಂಪರ್ಕಿಸಿದರು. ಅವರ ಮೂಲಕ ಅವರು ಬೈಅತ್‌ಗಾಗಿ ವಿನಂತಿಯನ್ನು ಕಳುಹಿಸಿದರು. ನಂತರ ಅವರು ಅವರೊಂದಿಗೆ ವಿವಿಧ ಪುಸ್ತಕಗಳು ಮತ್ತು ಪ್ರಶ್ನೆಗಳು ಮತ್ತು ಉತ್ತರಗಳನ್ನು ಅಧ್ಯಯನ ಮಾಡಿದರು ಮತ್ತು ಶೀಘ್ರದಲ್ಲೇ ಅವರು ಜಮಾತ್‌ನ ವಿಚಾರಗಳು ಮತ್ತು ನಂಬಿಕೆಗಳನ್ನು ಬೋಧಿಸಲು ಪ್ರಾರಂಭಿಸಿದರು ಮತ್ತು ಆಕ್ಷೇಪಣೆಗಳಿಗೆ ಉತ್ತರಿಸಲು ಮತ್ತು ಪರಿಣಾಮಕಾರಿಯಾಗಿ ಜಮಾಅತ್ ಅನ್ನು ಸಮರ್ಥಿಸಲು ಪ್ರಾರಂಭಿಸಿದರು.

ಜೋರ್ಡಾನ್‌ನಿಂದ, ಯಾಜಿನ್ ರಬಾಬಾ ಸಾಹಿಬ್ ಬರೆಯುತ್ತಾರೆ: ನನ್ನ ಸಹೋದರ ಫಿರಾಸ್ ಅಬ್ದುಲ್ ವಾಹಿದ್ ಸಾಹಿಬ್ ತುಂಬಾ ಒಳ್ಳೆಯ ಅಹ್ಮದಿ ಆಗಿದ್ದರು. ಜಮಾಅತ್ತಿನ ಪುಸ್ತಕಗಳನ್ನು ಅಧ್ಯಯನ ಮಾಡುವುದು. ಅವರು ಶತ್ರುಗಳನ್ನು ಮತ್ತು ಧರ್ಮಭ್ರಷ್ಟರಿಗೆ ಉತ್ತರಿಸುತ್ತಿದ್ದರು. ಅವರು ನಿಜವಾಗಿಯೂ ಇಸ್ಲಾಂ ಅಹ್ಮದೀಯ ರಕ್ಷಕರಾಗಿದ್ದರು. ಫೇಸ್‌ಬುಕ್‌ನಲ್ಲಿ ಅಹ್ಮದಿ ಸ್ನೇಹಿತರು ಅವರನ್ನು ಫಾರ್ಸ್ ಅಹ್ಮದಿಯಾ ಎಂದು ಕರೆಯುತ್ತಿದ್ದರು, ಅಂದರೆ ಅಹ್ಮದಿಯಾದ ಕುದುರೆ ಸವಾರ. ಅವರ ಉಲ್ಲೇಖದಲ್ಲಿ ನನ್ನ ಕಣ್ಣುಗಳು ತೇವವಾಗಿವೆ. ದೇವರು ಅವರನ್ನು ಕ್ಷಮಿಸಲಿ.

ಫರಾಸ್ ಸಾಹಿಬ್ ಅಸಾಧಾರಣ ಸಂಶೋಧಕರಾಗಿದ್ದರು ಮತ್ತು ಅರೇಬಿಕ್ ಮತ್ತು ಇಂಗ್ಲಿಷ್‌ನಲ್ಲಿ ಭಾಷಾಂತರಿಸಲು ಮತ್ತು ಬರೆಯಲು ಅತ್ಯುತ್ತಮ ಸಾಮರ್ಥ್ಯವನ್ನು ಹೊಂದಿದ್ದರು ಎಂದು ತಮೀಮ್ ಅಬು ದಕ್ಕಾ ಬರೆಯುತ್ತಾರೆ. ಜಮಾಅತ್ತಿನ ವೆಬ್‌ಸೈಟ್‌ನಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ತಂಡದ ಸಕ್ರಿಯ ಸದಸ್ಯರಾಗಿದ್ದರು. ಅವರ ಉತ್ತರಗಳು ಯಾವಾಗಲೂ ಸಂಪೂರ್ಣ ಮತ್ತು ತರ್ಕಬದ್ಧವಾಗಿದ್ದು, ಪಕ್ಷಪಾತ ಮತ್ತು ಪಕ್ಷೇತರ ಅರೇಬಿಕ್ ಮತ್ತು ಇಂಗ್ಲಿಷ್ ಹಾದಿಗಳಿಂದ ಬೆಂಬಲಿತವಾಗಿದ್ದವು. ಕೆಲವು ಅರಬ್ ಧರ್ಮಭ್ರಷ್ಟರು ಮತ್ತು ಕಪಟಿಗಳು ಫಿತ್ನಾವನ್ನು ಎತ್ತಿದಾಗ, ಅವರ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸಿದ ಮತ್ತು ವಿರೋಧಿಸಿದವರಲ್ಲಿ ದಿವಂಗತ ಫಿರಾಸ್ ಸಾಹಿಬ್ ಅಗ್ರಗಣ್ಯರಾಗಿದ್ದರು. ಅವರ ಪರಿಪೂರ್ಣ ನಂಬಿಕೆ ಮತ್ತು ಪ್ರೀತಿಯಿಂದಾಗಿ, ಅವರು ಜಮಾಅತ್ ಮತ್ತು ಖಿಲಾಫತ್ ಅನ್ನು ಬಲವಾಗಿ ಸಮರ್ಥಿಸಿಕೊಂಡರು.

ದಿವಂಗತ ಸಹೋದರ ಫಿರಾಸ್ ಅಬ್ದುಲ್ ವಾಹಿದ್ ಸಾಹಿಬ್ ಅವರು ತಮ್ಮ ಅಪಾರ ಜ್ಞಾನ ಮತ್ತು ಅಸಾಧಾರಣ ಬುದ್ಧಿವಂತಿಕೆ, ಅವರ ವಿಷಯಗಳು ಮತ್ತು ಬರಹಗಳಿಗೆ ವಿಶೇಷವಾಗಿ ಹೆಸರುವಾಸಿಯಾಗಿದ್ದರು ಎಂದು ಡಾ. ಐಮನ್ ಔದಾ ಸಾಹಿಬ್ ಹೇಳುತ್ತಾರೆ. ಜಮಾಅತ್ ಗೆ ಸೇರಿ ಬಹಳ ದಿನಗಳೇನು ಆಗಿರಲಿಲ್ಲ, ಆದರೆ ಅತಿ ಕಡಿಮೆ ಅವಧಿಯಲ್ಲಿ ಜಮಾಅತ್ ನ ವಿಚಾರ-ವಿಶ್ವಾಸಗಳ ಬಗ್ಗೆ ಆಳವಾದ ತಿಳಿವಳಿಕೆ ಪಡೆದು ತಮ್ಮ ಪರಿಣಾಮಕಾರಿ ಉತ್ತರಗಳಿಂದ ಎದುರಾಳಿಗಳನ್ನು ಸೋಲಿಸಿದರು. ಅವರ ಬಾಯಿ ಮುಚ್ಚುತ್ತಿದ್ದರು. ಕೆಲವು ವರ್ಷಗಳ ಹಿಂದೆ ನಮ್ಮ ಅರೇಬಿಕ್ ವೆಬ್‌ಸೈಟ್‌ನಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿಯನ್ನು ದಿವಂಗತರಿಗೆ ವಹಿಸಲಾಯಿತು, ಅದನ್ನು ಅವರು ಕೊನೆಯ ಕ್ಷಣದವರೆಗೂ ಶ್ರದ್ಧೆಯಿಂದ ನಡೆಸಿದರು. ಅತ್ಯಂತ ಸಮರ್ಪಣೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರು. ಅವರ ಸುಮಾರು 800 ಲೇಖನಗಳು ಅಥವಾ ಅರೇಬಿಕ್ ಪ್ರಶ್ನೋತ್ತರ ವೆಬ್‌ಸೈಟ್ "ಬಸತ್ ಅಹ್ಮದಿ" ನಲ್ಲಿನ ಆಕ್ಷೇಪಣೆಗಳಿಗೆ ಪ್ರತಿಕ್ರಿಯೆಗಳು ಅವರ ಆಳವಾದ ಶೈಕ್ಷಣಿಕ ವ್ಯಕ್ತಿತ್ವ ಮತ್ತು ಜಮಾಅತ್‌ನ ಆಲೋಚನೆಗಳು ಮತ್ತು ನಂಬಿಕೆಗಳನ್ನು ಹರಡಲು ಮತ್ತು ವಿರೋಧಿಗಳ ಆಕ್ಷೇಪಣೆಗಳಿಗೆ ಉತ್ತರಿಸುವ ಸಮರ್ಪಣೆಗೆ ಸಾಕ್ಷಿಯಾಗಿದೆ.

ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಲಿ. ಅವರ ಪತ್ನಿ ಮತ್ತು ಮಗುವಿಗೆ ಸಹ ಪ್ರಾಯೋಜಕತ್ವ ನೀಡಬೇಕು. ಅವರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ಅಲ್ಲಾಹನು ಪ್ರಾರ್ಥನೆಯನ್ನು ಸ್ವೀಕರಿಸಲಿ ಮತ್ತು ಜಮಾಅತ್‌ಗೆ ಅವರಂತೆ ಹೆಚ್ಚಿನ ಅನುಗ್ರಹವನ್ನು ನೀಡಲಿ. ನಮಾಝ್‌ನ ನಂತರ, ಇನ್‌ಶಾಅಲ್ಲಾಹ್, ನಾನು ಹೇಳಿದಂತೆ, ನಾನು ನಮಝ್ ಜನಾಝುವನ್ನು ನಿರ್ವಹಿಸುವೆನು.

### ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝೂರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

### ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ªÀË H zï(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಸ್ತುತಃ ಖಾತಮಲ್ ಔಲಿಯಾ ಹಝ್ರತ್ ಇಮಾಮ್ ಮಹದಿ(ಅ) ರವರ ಪವಿತ್ರ ಅಂತರಂಗವಾಗಿದೆ. ಏಕೆಂದರೆ ಇಮಾಮ್ ಮಹದಿಯರು ಪ್ರವಾದಿ (ಸ) ರವರದ್ದೇ ಪರಿಪೂರ್ಣ ಮಾದರಿಯಾಗಿದ್ದಾರೆ. (ಶರಹ ಫಸೂಸ್ ಅಲ್‌ಹಕಮ್ ಹಿಂದಿ, ಹಝ್ರತ್ ಮುಲ್ಲಾ ಅಬ್ದುರ್ರಹ್ಮಾನ್ ಹಾಮಿ, ಪುಟ–69)

ಮುನ್ಸಿಫ್ ಪತ್ರಿಕೆಯ ಸಂಪಾದಕರು ಗಮನ ನೀಡಲಿ! ಇಮಾಮ್ ಮಹದಿಯರು ಪ್ರವಾದಿ(ಸ) ರವರದ್ದೇ ಪರಿಪೂರ್ಣ ಮಾದರಿಯಾಗಿದ್ದಾರೆ ಎಂದರೆ ಹಝ್ರತ್ ರಸೂಲುಲ್ಲಹ್(ಸ) ರವರ ಪೂರ್ಣ ಪ್ರತಿಬಿಂಬಿತ ರೂಪ ಮತ್ತು ಅವರ ಸಾದೃಶ್ಯರಾಗಿರುವರು.

ಹಝ್ರತ್ ಶಾಹ್‌ವಲಿ ಮುಹದ್ದಿಸ್ ದೇಹಲ್ವಿ (ರಹ) (1114 ಹಿ.– 1175 ಹಿ) ಹೇಳುತ್ತಾರೆ:

"ಮುಹಮ್ಮದಿಯ ಸಮುದಾಯದಲ್ಲಿ ಆಗಮಿಸಲಿರುವ ವಾಗ್ದತ್ತ ಮಸೀಹನ ಹಕ್ಕಾಗಿದೆ. ಅವರು ಸಯ್ಯದುಲ್ ಮುರ್‌ಸಲೀನ್ (ಪ್ರವಾದಿಗಳ ಸರದಾರರು) ರವರ ಪ್ರಕಾಶಗಳನ್ನು ಪ್ರತಿಬಿಂಬಿಸುವರು. ಸಾಮಾನ್ಯ ಜನರು ಭಾವಿಸುವರು ವಾಗ್ದತ್ತ ಮಸೀಹರು ಲೋಕಕ್ಕೆ ಆಗಮಿಸುವಾಗ ಕೇವಲ ಒಬ್ಬ ಉಮ್ಮತಿಯಾಗಿ ಬರುವರು ಎಂದು. ಖಂಡಿತವಾಗಿಯೂ ಅದು ತಪ್ಪು ಬದಲಿಗೆ ಅವರು ಮುಹಮ್ಮದ್ ಹೆಸರಿನ ಪೂರ್ಣ ವ್ಯಾಖ್ಯಾನರೂಪಿಯಾಗಿರುವರು ಎಂದರೆ ಅವರು (ಅ) ಅವರದ್ದೆ(ಸ) ಬದಲಿ ರೂಪಯಾಗಿರುವರು. ಹೀಗೆ ಅವರ ಮತ್ತು ಒಬ್ಬ ಸಾಮಾನ್ಯ ಉಮ್ಮತಿಯ ನಡುವೆ ಬಹಳಷ್ಟು ವ್ಯತ್ಯಾಸವಿದೆ." (ಅಲ್ ಖೈರುಲ್ ಕಸೀರ್, ಹಝ್ರತ್ ಶಾಹ್ ವಲೀವುಲ್ಲಾ ಮುಹದ್ದಿಸ್ ದೆಹಲ್ವಿ, ಪುಟ–72, ಮದೀನ ಪ್ರೆಸ್ ಬಿಜ್ನೂರ್)

ಇಮಾಮ್ ಮಹದಿ, ಮುಹಮ್ಮದ್ ಹೆಸರಿನ ಪೂರ್ಣ ವ್ಯಾಖ್ಯಾನ ರೂಪಿಯಗಿರುವರು ಮತ್ತು ಅವರು (ಅ) ಅವರದ್ದೇ (ಸ) ಬದಲಿ ರೂಪವಾಗಿರುವರು. ಮುನ್ಸಿಫ್ ಪತ್ರಿಕೆಯ ಸಂಪಾದಕರು ಹೇಳಲಿ, ಅವರು ಈ ವಾಕ್ಯ ಕುರಿತು ಏನು ಅರ್ಥ ಭಾವಿಸುವರು? ಮುಹಮ್ಮದರ ಪ್ರತಿಬಿಂಬಿತರೂಪ ಎಂಬ ಆಕ್ಷೇಪ ದೂರವಾಗಿದೆಯೇ ಅಥವ ಇಲ್ಲ?

ಉರ್ದುವಿನ ಪ್ರಸಿದ್ಧ ಕವಿ ಜನಾಬ್ ಇಮಾಮ್ ಬಕ್ಷ್ (1188 ಹಿ–1253 ಹಿ) ತನ್ನ ಕವನ ಸಂಗ್ರಹದಲ್ಲಿ ಹೇಳುತ್ತಾರೆ.

ಅವ್ವಲ್ ವ ಆಖಿರ್ ಕಿ ನಿಸ್ಬತ್ ಹೋಗಿ ಸಾದಿಖ್ ಯಹಾಂ
ಸೂರತ್ ಮಾನಿ ಶಿಬ ಮುಸ್ತಫಾ ಪೈದಾ ಹುವಾ
ದೇಖ್ ಕರ್ ಉಸ್ಕೊ ಕರೇಂ ಗೆ ಲೋಗ್ ರುಜ್‌ಅತ್ ಕಾ ಗುಮಾನ್
ಯೂನ್ ಕಹೇಂಗೆ ಮೊಜ್‌ಝುಸೆ ಮುಸ್ತಫಾ ಪೈದಾ ಹುವಾ

ಅನುವಾದ : ಮುಸ್ತಫಾ (ಸ) ರವರ ರೂಪದಲ್ಲಿ ಹುಟ್ಟಿದರು ಎಂದರೆ ಹಝ್ರತ್ ರಸೂಲುಲ್ಲಾಹ್(ಸ) ರವರ ಅರ್ಥದಲ್ಲಿ ಆಗಮನವಾಗುವುದು. ಇಮಾಮ್ ಮಹದಿಯನ್ನು ನೋಡಿ ಜನರು ಮುಹಮ್ಮದ್ ಮುಸ್ತಫಾ(ಸ) ರವರ ರೂಪ ಎಂದೇ ಭಾವಿಸುವರು. ಸಂಪದಕರೇ! ಸಾದೃಶ್ಯರೂಪ ಮತ್ತು ಪ್ರತಿಬಿಂಬಿತ ರೂಪ ಒಂದೇ ಆಗಿದೆ. ಅಂದಹಾಗೆ ಪೂರ್ವ ಮಹಾತ್ಮರುಗಳ ಇದು ಒಮ್ಮತದ ತೀರ್ಪಾಗಿದೆ. ಇಮಾಮ್ ಮಹದಿಯರು ಹಝ್ರತ್ ರಸೂಲುಲ್ಲಾಹ್(ಸ) ರವರ ಪರಿಪೂರ್ಣ ಸಾದೃಶ್ಯರೂಪವಾಗಿರುವರು.

ಶೇಖ್ ಮುಹಮ್ಮದ್ ಅಕ್ರಮ್ ಸಾಬಿರಿ (1130 ಹಿ) ಹೇಳುತ್ತಾರೆ:

ಲೋಕದ ಆರಂಭದಲ್ಲಿ ಬಂದ ಆದಮರು(ಅ) ಮುಹಮ್ಮದ್(ಸ) ರವರ ಮೊದಲ ಸಾದೃಶ್ಯರೂಪವಾಗಿ ಆಗಮಿಸಿದರು ಎಂದರೆ ಲೋಕದ ಆರಂಭ ಮುಹಮ್ಮದ್ ಮುಸ್ತಫಾ (ಸ) ರವರ ಆಧ್ಯಾತ್ಮಿಕ ಪ್ರತಿಬಿಂಬ ರೂಪವಾಗಿ ಹಝ್ರತ್ ಆದಮ್ (ಅ) ಆಗಮಿಸಿದರು ಮತ್ತು ಮುಹಮ್ಮದ್ (ಸ) ರವರೇ ಅಂತಿಮ ಕಾಲದಲ್ಲಿ ಖಾತಮಲ್ ವಿಲಾಯತ್ ಇಮಾಮ ಮಹದಿಯರ ರೂಪದಲ್ಲಿ ಪ್ರಕಟಗೊಳ್ಳುವರು ಎಂದರರೆ ಮುಹಮ್ಮದ್ ಮುಸ್ತಫಾ (ಸ) ರವರ ಆಧ್ಯಾತ್ಮಿಕತೆ ಮಹದಿಯರಲ್ಲಿ ಅವತರಿಸುವುದು. (ಈಖ್ತಿಬಾಸ್ ಅಲ್ ಅನ್ವಾರ್–ಶೇಖ್ ಅಕ್ರಮ್ ಸಾಬರಿ ಪುಟ–52)

ಮಹಾತ್ಮ ಸೂಫಿ ಹಝ್ರತ್ ಖಾಜಾ ಫರೀದ್ ಸಾಹಿಬ್, ಆಫ್ ಚಾಂಚಡಾಂ ಶರೀಫ್ (1248 ಹಿ–1367 ಹಿ) ಹೇಳುತ್ತಾರೆ:

"ಹಝ್ರತ್ ಆದಮ್ ಸಫಿಯುಲ್ಲಾಹ್ ಯಿಂದ ಹಿಡಿದು ಖಾತಮಲ್ ವಿಲಾಯತ್ ಇಮಾಮ್ ಮಹದಿಯವರೆಗೆ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ಅವತರಣಗೊಂಡಿದ್ದಾರೆ. ಮೊದಲ ಬಾರಿಗೆ ಅವರು(ಸ) ಹಝ್ರತ್ ಆದಂ(ಅ) ರೂಪದಲ್ಲಿ ಅವತರಿಸಿದರು. ಅನಂತರ ಇತರ ಮಹಾತ್ಮರುಗಳಲ್ಲಿ ಹಂತಹಂತವಾಗಿ ಅವತರಿಸಿದರು ಮತ್ತು ಅವತರಿಸುತ್ತಿರುವರು. ಕೊನೆಗೆ ಇಮಾಮ್ ಮಹದಿಯಾಗಿ ಅವತರಿಸುವರು. ಅಂದಹಾಗೆ ಹಝ್ರತ್ ಆದಮ್(ಅ) ರಿಂದ ಹಿಡಿದು ಇಮಾಮ್ ಮಹದಿಯವರೆಗೆ ಎಷ್ಟೆಲ್ಲಾ ಪ್ರವಾದಿಗಳು ಮತ್ತು ಮಹಾತ್ಮರುಗಳು ಆಗಮಿಸಿದ್ದಾರೆ. ಅವರೆಲ್ಲರೂ ಮುಹಮ್ಮದ್(ಸ) ರವರ ಆಧ್ಯಾತ್ಮಿಕ ಪ್ರತಿನಿಧಿಗಳೆ ಆಗಿದ್ದಾರೆ. (ಮುಖಾಬೀಸುಲ್ ಮುಜಾಲಿಸ್, ಪುಟ–419, ಮಖ್ಬೂಸ್ ಸಂಖ್ಯೆ–62, ಮೌಲಾನಾ ರುಕ್ನುದ್ದೀನ್, ಅನುವಾದ: ಕಪ್ತಾನ್ ವಾಹಿದ್ ಬಖ್ಷ್ ಸಯಾಲ್, ಇಸ್ಲಾಮಿಕ್ ಬುಕ್ ಫೌಂಡೇಷನ್ ಲಾಹೋರ್, ಸೂಫೀ ಫೌಂಡೇಷನ್ ಬಹಾವಲ್‌ಪೂರ್)

ಶಿಯಾ ಪಂಡಿತರು ಮೌಲಾನ ಸಯ್ಯದ್ ಮುಹಮ್ಮದ್ ಸಬ್‌ತೇನ (1335 ಹಿ) ಹೇಳುತ್ತಾರೆ: ಮಹದಿಯರು ಆತ್ಮೀಯವಾಗಿ ರಸೂಲುಲ್ಲಾಹ್ (ಸ) ರವರ ಹಾಗೂ ಅವರ ಪವಿತ್ರ ಗುಣಗಳ ಪ್ರತಿನಿಧಿಯಾಗಿರುವರು ಮತ್ತು ರಸೂಲುಲ್ಲಾಹ(ಸ) ರವರ ಕನ್ನಡಿಯಾಗಿರುವರು. ಮುಹಮ್ಮದರ(ಸ) ಎಲ್ಲ ಮಹಾನ್ ಗುಣಗಳು ಅವರಲ್ಲಿ (ಅ) ಅವತರಿಸುವುದು. ಅಂದಹಾಗೆ ಅವರು (ಅ) ಏಕರೂಪ ಏಕನಾಮ, ಏಕ ಪದನಾಮ, ಮುಹಮ್ಮದಿ ಪ್ರಕಾಶ, ಮುಹಮ್ಮದಿ ಗುಣಗಳು ಸಹ ಸಾದೃಶ್ಯರೂಪವಾಗಿ ಬರುವುದು ಅನಿವಾರ್ಯವಾಗಿರುವುದು. (ಅಸ್ಸಿರಾತುಸ್ಸವಿ ಫೀ ಅಹ್ವಲುಲ್ ಮಹದಿ, ಪುಟ–409, ಸೈಯದ್ ಮುಹಮ್ಮದ್ ಸಬ್ತೀನ್, ಮೆನೇಜರ್ ಅಲ್‌ಬುರ್ಹಾನ್ ಬುಕ್ ಡಿಪೊ 33, ಉಮರ್ ಓಡ್ ಇಸ್ಲಾಮ್ ಪುರ ಲಹೋರ್)

ಖ್ವಾರಿ ಮುಹಮ್ಮದ್ ತಯ್ಯಿಬ್ ಮಾಜಿ ಮುಹ್‌ತಮಿಮ್ ದಾರೂಲ್ ಉಮಾಮ್ ದೇವಬಂದ್ (1320 ಹಿ–1403 ಹಿ) ಹೇಳುತ್ತಾರೆ: (1) ಏಕೆಂದರೆ ಹಝ್ರತ್ ಈಸಾ(ಅ) ರವರು ಆಗಮಿಸಿದ ಕಾರಣ ಮುಹಮ್ಮದ(ಸ) ರ ರೂಪ ಅವತರಿಸಿದಂತಾಗಿದೆ. ಮತ್ತು ಹುರ್ಖೂರ್‌ರ ಆಧ್ಯಾತ್ಮಿಕ ಪುತ್ರರೆಂದು ಸಾಬೀತಾಗುತ್ತದೆ. ಆದ್ದರಿಂದ **"ವಲದು ಸಿರ್ರುನ್ ಲಿಅಬೀಹಿ"** ತತ್ತದನ್ವಯ ಈಸಾ (ಅ) ರ ವ್ಯಕ್ತಿತ್ವ, ರಸೂಲುಲ್ಲಾಹ್ (ಸ) ರವರ ವ್ಯಕ್ತಿತ್ವದ ಆ ಎಲ್ಲಾ ವಿಶೇಷ ಗುಣ ಅವತರಿಸಿದವು. ಅದು ದೈವಿಕವಾಗಿ ಇತರೆ ಪ್ರವಾದಿಗಳಿಗೆ ಲಭಿಸುತ್ತಿರಲಿಲ್ಲ. ಅಂದಹಾಗೆ ಖಾತಮಿಯತ್ ಪದವಿ, ಪ್ರಸಿದ್ಧಿಯ ಗುಣ, ದಾನನ ಸ್ಥಾನ, ಕಾರುಣ್ಯ ಮುಗ್ಧತೆ, ಜ್ಞಾನ, ಆಧ್ಯಾತ್ಮಿಕ ಜ್ಞಾನ, ವಲಸೆ ಹೋಗುವಿಕೆ, ಜಿಹಾದ್, ಸ್ಥಾನಮಾನ ಆರಾಧನೆಗಳು, ಸುವಾರ್ತೆಗಳು, ಅಂತ್ಯ ದಿನದ ಮಾಹಿತಿ ಇತ್ಯಾದಿಯಂತಹ ಮುಖ್ಯ ಮತ್ತು ಮಹೋನ್ನತ ಕಾರ್ಯಗಳು ರಸೂಲುಲ್ಲಾಹ್ (ಸ) ರ ಪವಿತ್ರ ವ್ಯಕ್ತಿತ್ವದಿಂದ ಯಾರಿಗಾದರೂ ಹೊಂದಾಣಿಕೆ ಸಾಬೀತಾಗುವುದಿದ್ದರೆ ಅದು ಹಝ್ರತ್ ಈಸಾ (ಅ) ರವರ ಪವಿತ್ರ ವ್ಯಕ್ತಿತ್ವ ಆಗಿದೆ. (ತಾಲೀಮ್ಾತುಲ್ ಇಸ್ಲಾಂ ಮತ್ತು ಮಸೀಹಿ ಅಖ್ವಾಮ್, ಖಾರಿ ಮುಹಮ್ಮದ್ ತೈಯಬ್ ದಾರುಲ್ ಉಲೂಮ್, ದೇವ್‌ಬಂದ್, ಪುಟ–144 ನಫೀಸ್ ಅಕಾಡಮಿ)

(2) ಏನಿದ್ದರೂ ಖಾತಮಿಅತ್‌ನಲ್ಲಿ ಹಝುರತ್ ಮಸೀಹ್(ಅ) ರವರಿಗೆ ಪರಿಪೂರ್ಣ ಹೊಂದಾಣಿಕೆ ಇರುತ್ತಿದ್ದರೆ. ಹೀಗೆ ಖಾತಮಿಅತ ಗುಣಗಳಲ್ಲಾಗಲೀ ಮತ್ತು ಸ್ಥಾನದಲ್ಲಾಗಲಿ ಹೊಂದಾಣಿಕೆಯನ್ನು ವಿಶಿಷ್ಟಗೊಳಿಸಲಾಗಿದೆ. ಅದರಿಂದ ಸ್ಪಷ್ಟಗೊಳ್ಳುವುದೇನೆಂದರೆ ಹಝ್ರತ್ ಈಸಾ(ಅ) ರವರಿಗೆ ಮುಹಮ್ಮದ್ (ಸ) ರವರ ಆಸ್ಥಾನದಿಂದ ಖಲ್‌ಖನ್ ವ ರುತ್‌ಬತನ್ ವ ಮಖಾಮನ್ ಇದೇ ರೀತಿಯ ಹೊಂದಾಣಿಕೆಯಿದೆ. ಯಾವ ರೀತಿ, ಒಂದು ವಸ್ತುವಿಗೆ ಎರಡು ಸಹಭಾಗಿಗಳಲ್ಲಿ ಇರುತ್ತದೆ. ಅಥವ ತಂದೆ ಮಗನಲ್ಲಿ ಇರುತ್ತದೆ." (ತಾಲೀಮ್ಾತುಲ್ ಇಸ್ಲಾಂ ಮತ್ತು ಮಸೀಹಿ ಅಖ್ವಾಮ್, ಖಾರಿ ಮುಹಮ್ಮದ್ ತೈಯಬ್ ದಾರುಲ್ ಉಲೂಮ್, ದೇವ್‌ಬಂದ್, ಪುಟ–129 ನಫೀಸ್ ಅಕಾಡಮಿ)

ನಾವು ಒಂದಲ್ಲ, ಎರಡಲ್ಲ ಬದಲು ಹಲವು ಪುರಾವೆಗಳೊಂದಿಗೆ ಸಾಬೀತುಪಡಿಸಿದ್ದೇವೆ. ಸಮುದಾಯದ ಮಹಾತ್ಮರು ಈ ಮಾತಿನ ಮೇಲೆ ಒಮ್ಮತದ ಅಭಿಪ್ರಾಯ ಹೊಂದಿದ್ದಾರೆ. ಇಮಾಮ್ ಮಹದಿ ಹಝ್ರತ್ ರಸೂಲುಲಾಹ್(ಸ) ರ ಕೇವಲ ಸಾದೃಶ್ಯ ರೂಪ ಆಗಿರುವುದಲ್ಲದೇ ಪರಿಪುರ್ಣ ಸಾದೃಶ್ಯ ರೂಪವಾಗಿರುವರು. ಇನ್ನಷ್ಟು ಪುರಾವೆಗಳಿಗೋಸ್ಕರ ನಮ್ಮ ಪುಸ್ತಕಗಳಾದ "ಅಹ್ಮದಿಯಾ ತಾಲಿಮಿ ಪಾಕೆಟ್ ಬುಕ್, ಲೇಖಕರು ಖಾಜ್ಜಿ ಮುಹಮ್ಮದ್ ನಝೀರ್ ಸಾಹಿಬ್ ಲಾಯಲ್‌ಪೂರಿ ಅಲ್ಲದೇ "ಮುಕಮ್ಮಲ್ ತಬ್ಲೀಗ್ಗಿ ಪಾಕೆಟ್ ಬುಕ್–ಲೇಖಕರು ಖಾಲಿದ್ ಅಹ್ಮದಿಅತ್ ಮಲಿಕ್ ಅಬ್ದುಲ್ ರಹ್ಮಾನ್ ಖಾದಿಮ್ ಸಾಹಿಬ್, ನೋಡಬಹುದಾಗಿದೆ. ಮುಂದಿನ ಸಂಚಿಕೆಯಲ್ಲಿ ಮುನ್ಸಿಫ್‌ನ ಇತರ ಆಕ್ಷೇಪಣೆಗಳಿಗೆ ಉತ್ತರ ನೀಡಲಾಗುವುದು. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

## ತಫ್ಸೀರೆ ಕಬೀರ್

### ಅಬುಲಹಬ್ ಪತ್ನಿಯ ಕಥೆಯು ಕೇವಲ ಕಟ್ಟುಕಥೆಯಾಗಿದೆ, ಇಡೀ ಲೋಕಕ್ಕೆ ಹೆದರದ ಅಲ್ಲಾಹನ ಆ ಪ್ರವಾದಿಯು(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಹೇಗೆ ಸಾಧ್ಯ, ಅಲ್ಲಾಹನು ಅವಳನ್ನು ಮಾಯವಾಗಿಸುವ ದುಸ್ಥಿತಿ ಒದಗಿ ಬಂತು.

ಸಯ್ಯದ್ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಈಸ್ರಾಯೀಲ್ ವಚನ 46 **ವಇಝಾ ಖರಅ್‌ತಲ್ ಖುರ್‌ಆನ ಜಅಲ್‌ನ ಬೈನಕ ವ ಬೈನಲ್ಲಝೀನ ಲಾ ಯುಮಿನೂನ ಬಿಲ್‌ಆಖಿರತಿ ಹಿಜಾಬಮ್ಮಸ್‌ತೂರ**. ದ ವ್ಯಾಖ್ಯಾನದಲ್ಲಿ ಹೇಳುತ್ತಾರೆ.

ಈ ವಚನಕ್ಕೆ ಎರಡು ಅರ್ಥಗಳಿವೆ. 1) ನೀನು ಪವಿತ್ರ ಖುರ್‌ಆನ್ ಪಠಿಸುವಾಗ ನಾವು ನಿನ್ನ ನಡುವೆ ಮತ್ತು ಅಂತಿಮ ತೀರ್ಮಾನ ದಿನದ ಮೇಲೆ ವಿಶ್ವಾಸ ಹೊಂದಿದ ಜನರ ನಡುವೆ ಎಂತಹ ಪರದೆಯನ್ನು ಉಂಟು ಮಾಡುತ್ತೇವೆ ಎಂದರೆ ಅದನ್ನು ಸ್ವಯಂ ಅವರೇ ತಿಳಿಯಲಾರರು. ಎಂದರೆ ಆ ಪರದೆಯು ಸಹ ಅವರ ದೃಷ್ಟಿಗೆ ಗೋಚರಿಸದು. ಇದನ್ನು ಹೇಳುವ ಉದ್ದೇಶ ಯಾವೊಬ್ಬ ಮೂಡನು ಈ ಬಾಹ್ಯ ಪರದೆ ಎಂದು ಭಾವಿಸಬಾರದು.

ಕೆಲ ಜನರು ಪರದೆ ಎಂದೆ ಅದರಲ್ಲಿ ನಬಿವರ್ಯರು(ಸ) ಅಡಗಿಕೊಳ್ಳುತ್ತಿದ್ದರು ಎಂದು ಭಾವಿಸುತ್ತಾರೆ, ಅವರು ಅಬುಲಹಬನ ಪತ್ನಿಯ ಕಥೆಯನ್ನು ಬರೆದಿದ್ದಾರೆ, ಸೂರ: ಲಹಬ್ ಅವತರಿಸಿದಾಗ, **ಫೀಜೀದಿಹಾ ಹಬ್‌ಲುಮ್ ಮಿಮ್ಮಸದ್**, ಅವತಾರ ತಡೆದು ಅವಳು ಕೋಪಗೊಂಡು ನಬಿ(ಸ) ಅವರಿಗೆ ಸಂಕಷ್ಟಕ್ಕೆ ಒಳಪಡಿಸಲು ಮುಂದಾದಳು. ನಬಿ ಕರೀಂ(ಸ) ಪ್ರಾರ್ಥಿಸಿದರು. ಓ ದೇವಾ ಆಕೆಯ ದುಷ್ಟತನದಿಂದ ನನ್ನನ್ನು ರಕ್ಷಿಸು. ಆಗ ಅಲ್ಲಾಹನು ಅವರ ಮುಂದೆ ಒಂದು ಪರದೆಯನ್ನು ಅಳವಡಿಸಿದನು. ಅದರಿಂದ ಅವಳಿಗೆ ಕಾಣಲಾಗಲಿಲ್ಲ. ಇದೆಲ್ಲ ಕಪೋಲಕಲ್ಪಿತ ಮಾತ್ರವಾಗಿದೆ. ಇಡೀ ಲೋಕಕ್ಕೆ ಹೆದರದ ಆ ಅಲ್ಲಾಹನ ಪ್ರವಾದಿ(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಸಾಧ್ಯವೇ? ಅವಳಿಂದ ಎಷ್ಟೊಂದು ಹೆದರಿದರೆಂದರೆ ಅಲ್ಲಾಹನು ಅವಲನ್ನು ಮಾಯವಾಗಿಸಬೇಕಾಯಿತು. ಈ ಅಸಾಧಾರಣ ಮಾತನ್ನು ಯಾವ ವಿವೇಕನು ನಂಬಲು ಸಾಧ್ಯವಿಲ್ಲ. ಈ ವರದಿ ಪ್ರಸ್ತುತಪಡಿಸುವವರು, ಇಷ್ಟು ಯೋಚಿಸುವುದಿಲ್ಲ. ಅಲ್ಲಾಹನು ಆ ಪರದೆಯನ್ನು **"ಮಸ್ತೂರ್"** ಎಂದು ಕರೆದಿದ್ದಾನೆ, ಎಂದರೆ ಅದು ಕಣ್ಣಿಗೆ ಗೋಚರಿಸಲಾಗದಂತಹ ಪರದೆಯಾಗಿದೆ. ಆದರೆ ಈ ಜನರು ನಬಿ ಕರೀಂ(ಸ) ರನ್ನು ಮಸ್ತೂರ್ ಎಂದು ಭಾವಿಸುತ್ತಾರೆ.

(2) ಇದರ ಎರಡನೆ ಅರ್ಥ ಏನಾಗಬಹುದೆಂದರೆ, ಆ ಪರದೆಯ ಮುಂದೆ ಮತ್ತು ಹಿಂದೆ ಒಂದು ಪರದೆ ಇರುತ್ತದೆ, ಎಂದರೆ ಒಂದು ಪರದೆ ನಿನ್ನ ಮತ್ತು ಅವರ ನಡುವೆ ಇರುವುದಿಲ್ಲ. ಬದಲು ಹಲವು ಪರದೆಗಳು ಮಧ್ಯದಲ್ಲಿರುತ್ತವೆ. ಒಂದು ಪರದೆ ಸಮುದಾಯದ ಹೆಮ್ಮೆಯ ಕುರಿತಾಗಿದ್ದರೆ, ಒಂದು ಸಂಪತ್ತಿನ ಪರದೆ, ಒಂದು ನೀತಿಯ ಪರದೆ ಇತ್ಯಾದಿ, ಇತ್ಯಾದಿ, ಎಂದರೆ ಕೆಲವೊಮ್ಮೆ ಜನರು ಈ ಪ್ರವಾದಿಯನ್ನು ನಂಬಿದರೆ ಸಮುದಾಯದವರನ್ನು ಬಿಡಬೇಕಾಗುತ್ತದೆ, ಒಮ್ಮೆ ಸಂಪತ್ತು ಕಳೆದುಕೊಳ್ಳುವ ಭೂಮಿ ಮುಂದಾಗುತ್ತದೆ, ಒಮ್ಮೆ ಹಲವು ರೀತಿಯ ದುಶ್ಚಟಗಳ ಪರದೆ ಮುಂದಾಗುತ್ತವೆ, ವಿಶ್ವಾಸ ತಂದರೆ ಇದನ್ನು ಬಿಡಬೇಕಾಗುತ್ತದೆ. ಆದುದರಿಂದ ಈ ವಚನದಲ್ಲಿ ಹೇಳಲಾಗಿದೆ, ಎಲ್ಲಿಯವರೆಗೆ ಈ ಜನರು ಈ ಪರದೆಗಳನ್ನು ದೂರ ಸರಿಸುವುದಿಲ್ಲ, ನಿನ್ನ ಕಡೆ ವಾಲಲಾರರು, ಆದರೆ ಆಪತ್ತಿನ ವಿಷಯವೇನೆಂದರೆ ಆ ಪರದೆಗಳು ಇವರಿಗೆ ಗೋಚರಿಸದು. ಅವರ ದೃಷ್ಟಿಯಿಂದ ದೂರವಾಗಿವೆ. ಅವರು ಪವಿತ್ರ ಖುರ್‌ಆನ್ನೇ ಕೆಟ್ಟ ವಸ್ತು ಎಂದು ಭಾವಿಸಿಕೊಂಡಿದ್ದಾರೆ, ಅದು ಒಳ್ಳೆಯದಾಗಿರುತ್ತಿದ್ದರೆ ನಮ್ಮ ಹೃದಯಗಳ ಮೇಲೆ ಅದರ ಪ್ರಭಾವವಾಗುತ್ತಿತ್ತು, ಎಂದರೆ ಅವರ ಹೃದಯಗಳ ಮೇಲೆ ಎಂತಹ ತುಕ್ಕು ಹಿಡಿದಿವೆ ಎಂದರೆ ಅವರು ಒಂದು ಒಳ್ಳೆಯ ವಸ್ತುವನ್ನು ಸಹ ಕೆಟ್ಟದ್ದಾಗಿ ಕಾಣುತ್ತಾರೆ. ಆದುದರಿಂದ ಅವರಿಗೆ ವಿಶ್ವಾಸ ತರುವುದು ಕಷ್ಟದಾಯಕವಾಗುತ್ತದೆ. ಈ ಅರ್ಥವನ್ನು ಮುಂದಿನ ವಚನ **ವಜಅಲ್‌ನ ಅಲಾ ಖುಲೂಬಿಹಿಮ್ ಅಕಿನ್ನತನ್** ದೃಢೀಕರಿಸುತ್ತದೆ. ಅವರ ಹೃದಯಗಳ ಮೇಲೆ ಒಂದು ಪರದೆ ಅಲ್ಲ, ಬದಲು ಹಲವು ಪರದೆಗಳು ಬಿದ್ದಿವೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-344, ಮುದ್ರಣ 2010 ಖಾದಿಯಾನ್)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
M.B. Nasir Ahmed & Family, Bengaluru, Karnataka

### ನಿಶ್ಚಿತಾರ್ಥದ ಸಮಯದಲ್ಲಿ ಸಿಹಿತಿಂಡಿಗಳನ್ನು ಹಂಚಲು ಅನುಮತಿ ಇದೆ, ಆದರೆ ಸಿಡಿಮದ್ದುಗಳನ್ನು ಸಿಡಿಸುವುದು ಮತ್ತು ಮನರಂಜನಾ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಿಶ್ಚಿತಾರ್ಥಗಳ ಸಮಾರಂಭದಲ್ಲಿ ಸಕ್ಕರೆ ಇತ್ಯಾದಿಗಳನ್ನು ಹಂಚಲಾಗುತ್ತದೆ ವಾಸ್ತವವಾಗಿ ಅದರ ಮೂಲ ಉದ್ದೇಶವೇನೆಂದರೆ, ಇತರ ಜನರಿಗೂ ಇದರ ಬಗ್ಗೆ ಸುದ್ದಿ ತಿಳಿಯಲಿ ಮತ್ತು ಇದರಲ್ಲಿ ಯಾವುದೇ ರೀತಿಯ ಅಡಚಣೆ ಉಂಟಾಗದಿರಲಿ ಎಂದಾಗಿದೆ. ಆದರೆ ಈಗ ಅದರ ಮೂಲ ಉದ್ದೇಶ ಕಣ್ಮರೆಯಾಗಿ ಅದರ ಸ್ಥಾನವನ್ನು ಕೇವಲ ನವೀಣಾಚರಣೆಗಳು ಪಡೆದುಕೊಂಡಿದೆ. ಮಾತ್ರವಲ್ಲ ಅದರೊಂದಿಗೆ ಇನ್ನೂ ಅನೇಕ ವಿಷಯಗಳು ಸೇರಿಕೊಂಡಿವೆ. ಆದ್ದರಿಂದ, ಅವುಗಳನ್ನು ಕಡ್ಡಾಯ ಪದ್ಧತಿಗಳೆಂದು ಪರಿಗಣಿಸಬಾರದು, ಇದರ ಬದಲು ಇದು ಮದುವೆಯ ಸಂಭಂಧಗಳನ್ನು ಕಾನೂನುಬದ್ಧಗೊಳಿಸಲು ಅಗತ್ಯವಾದ ವಿಷಯುವೆಂದು ಅರಿಯುಬೇಕು. ಸೃಷ್ಟಿಗಳಿಗೆ ಪ್ರಯೋಜನಕಾರಿಯಾಗುವ ವಿಷಯಗಳ ಮೇಲೆ ಶರೀಅತ್ ಎಂದು ತಡೆಯಾಗುವುದಿಲ್ಲ ಎಂಬುದನ್ನು ನೆನಪಿಡಿ, ಏಕೆಂದರೆ ಸೃಷ್ಟಿಗಳಿಗೆ ಪ್ರಯೋಜನ ನೀಡುವುದು ಶರಿಯತ್ತಿನ ಮೂಲ ಉದ್ದೇಶವಾಗಿದೆ. ಸಿಡಿಮದ್ದುಗಳು ಹಾಗೂ ಮನರಂಜನಾ ಕಾರ್ಯಕ್ರಮ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಏಕೆಂದರೆ ಇದರಿಂದ ಸೃಷ್ಟಿಗಳಿಗೆ ಹಾನಿಯೇ ಹೊರತು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ."

**(ಮಲ್‌ಫೂಝಾತ್ ಸಂಪುಟ-2, ಪುಟ-310)**

### ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: ಇನ್ನ **ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು."
(ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)
**(ನಝೂರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

### ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
Mubarak Ahmed Naseem & Family, Shimoga, Karnataka

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 26 October, 02 November 2023, Issue No. 43-44

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-42ರ ಉಳಿದ ಭಾಗ ಮುಂದುವರಿಸಲಾಗಿದೆ)*

### ಖಿಲಾಫತ್ ಫ್ಲೈಟ್

ಒದಗಿಸಲ್ಪಟ್ಟ ಬೋರ್ಡಿಂಗ್ ಮೇಲೆ ಖಿಲಾಫತ್ ಫಿಲ್ಯಾಟ್ 2022 ಎಂದು ಬರೆಯಲಾಗಿತ್ತು. ಫ್ಲೈಟ್ ಸಂಖ್ಯೆ KF-2022 ಎಂದಿತ್ತು. ಬೋರ್ಡಿಂಗ್ ಕಾರ್ಡ್‌ನ ಒಂದು ಕಡೆ ಈ ಪದಗಳು ನಮುದಿತವಾಗಿದ್ದವು.

Ahmadiyya muslim Community
USA (100) 1920-2020
Centennial Khilafat Flight 2022
In the company of Hazrat Mirza
Masroor Ahmed Khalifatul masih 5 (atba)

ವಿಮಾನ ಹತ್ತುವ ಮೊದಲು, ಪ್ರವಾಸ ಮಾಡುವ ಎಲ್ಲಾ ಬಾಂಧವರು ವಿಮಾನದ ಮುಂದೆ ನಿಂತುಕೊಂಡಿದ್ದರು. ಹುಝೂರ್ ಅನ್ವರ್(ಅತಬಿಅ) ಆಗಮಿಸುತ್ತಿದ್ದಂತೆ ಬಾಂಧವರೆಲ್ಲರೂ ತಮ್ಮ ಪ್ರೀತಿಯ ನೇತಾರರ ಜೊತೆ ಸಾಮೂಹಿಕ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. MTA ಇವೆಲ್ಲ ದೃಷ್ಯಗಳ ಚಿತ್ರ ತಯಾರಿಸಿದ್ದರು.

12 ಗಂಟೆ 50 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ವಿಮಾನ ಹತ್ತಿದರು. 12 ಗಂಟೆ 58 ಇಮಿಷಕ್ಕೆ ವಿವಾನ ಶಿಕಾಗೋವಿನ ಅಂತರರಾಷ್ಟ್ರೀಯ O'Hagre ವಿಮಾನ ನಿಲ್ದಾಣದಿಂದ ಡಲ್ಲಾಸ್‌ಗೆ ಪ್ರಯಾಣಿಸಿದರು. ಸುಮಾರು ಎರಡು ಗಂಟೆಗಳ ಪ್ರವಾಸದ ನಂತರ 2 ಗಂಟೆ 55 ನಿಮಿಷಕ್ಕೆ ಡಲ್ಲಾಸಿನ ಅಂತರಾಷ್ಟ್ರೀಯ Fort worth ವಿಮಾನ ನಿಲ್ದಾಣದ ಮೇಲೆ ಇಳಿಯಿತು. ಮತ್ತು ಇಳಿದು Taxi ಯಿಂದ Exit Gate ಗೆ ಬಂದು ನಿಂತರು. ಅಲ್ಲಿಂದ ಹೊರಗೆ ಹೋಗುವ ದೂರ ಅತ್ಯಂತ ಕಡಿಮೆ ಆಗಿತ್ತು. ಸಮೀಪವೇ ವಾಹನಗಳು ನಿಲ್ಲಿಸಿದ್ದರು.

ಹುಝೂರ್ ಅನ್ವರ್(ಅತಬಿಅ) ವಿಮಾನ ನಿಲ್ದಾಣದಿಂದ ಹೊರಗೆ ಆಗಮಿಸುತ್ತಲೇ ಸದರ್ ಜಮಾಅತ್ ಡಲ್ಲಾಸ್, ಖಾಲಿದ್ ರಹೀಮ್ ಶೇಖ್ ಸಾಹಿಬ್, ಮುಬಲ್ಲಿಗ್ ಡಲ್ಲಾಸ್ ಜ್ಹಹೀರ್ ಅಹ್ಮದ್ ಖಾಜ ಸಾಹಿಬ್ ಮತ್ತು ಸದರ್ ಜಮಾಅತ್ Fort worth ಸಯೀದ್ ಚೌಧರಿ ಸಾಹಿಬ್ ಹುಝೂರ್ ಅನ್ವರ್(ಅತಬಿಅ)ಅವರಿಗೆ ಸ್ವಾಗತ ಕೋರಿದರು.

3 ಗಂಟೆ 10 ನಿಮಿಷಕ್ಕೆ ವಿಮಾನ ನಿಲ್ದಾಣದಿಂದ ಡಲ್ಲಾಸ್ ಜಮಾಅತಿನ ಕೇಂದ್ರ "ಮಸ್ಜಿದ್ ಬೈತುಲ್ ಇಕ್ರಮ್" ಕಡೆ ಪ್ರಯಾಣಿಸಿದರು. ಪೋಲೀಸ್ ವಹನಗಳು ಮತ್ತು ಇವರ ಹಲವು ಮೋಟಾರ್ ಸೈಕಲ್‌ಗಳ ತಂಡಗಳು Excort ಮಾಡಿದರು ಮತ್ತು ಜೊತೆ ಜೊತೆಯಲ್ಲೇ ರಸ್ತೆ clear ಗೊಳಿಸಿದರು ಸುಮಾರು 40 ನಿಮಿಷದ ಪ್ರಯಾಣದ ನಂತರ ಹುಝೂರ್ ಅನ್ವರ್(ಅತಬಿಅ) ಡಲ್ಲಾಸ್ ಜಮಾಅತಿನ ಕೇಂದ್ರಕ್ಕೆ ಆಗಮಿಸಿದರು.

### 2 ಅಕ್ಟೋಬರ್ 2022 (ರವಿವಾರ) ಶೇಷ ವರದಿ

### ಮಸ್ಜಿದ್ ಬೈತುಲ್-ಇಕ್ರಾಮ್‌ಗೆ ಆಗಮನ

ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಮತ್ತು ಹುಝೂರೆ ಅನ್ವರ್(ಅತಬಿಅ) ಅವರ ಶುಭ ದರ್ಶನ ಪಡೆಯಲು ಡಲ್ಲಾಸ್ ಜಮಾಅತಿನ ಬಾಂಧವರು ಮತ್ತು ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಬಂದ ಜಮಾಅತ್ನ ಬಾಂಧವರು ನೂರಾರು ಸಂಖ್ಯೆಯಲ್ಲಿ ಮುಂಜಾನೆಯಿಂದಲೇ "ಮಸ್ಜಿದ್ ಬೈತುಲ್ ಇಕ್ರಾಮ್" ಗೆ ಬರತೊಡಗಿದ್ದರು. ಪುರುಷ-ಸ್ತ್ರೀಯರ, ಮಕ್ಕಳ ವೃದ್ಧರ ಒಂದು ದೊಡ್ಡ ಸಂಖ್ಯೆಯಿತ್ತು, ಅದು ಸಾವಿರಕ್ಕಿಂತಲೂ ಹೆಚ್ಚಾಗಿತ್ತು. ತಮ್ಮ ನೇತಾರರನ್ನು ನೋಡಲು ಆತುರಪಡುತ್ತಿದ್ದರು.

ಡಲ್ಲಾಸ್ ಸ್ಥಳೀಯ ಜಮಾಅತಿನ ಹೊರತಾಗಿ ಈ ಕೆಳಗೆ ಕಾಣಿಸಿದ ವಿವಿಧ ಕ್ಷೇತ್ರಗಳಿಂದ ಬಾಂಧವರು ಆಗಮಿಸಿದ್ದರು.

Houston, Austin, Queens, Forth worth, Tulsa, MAry Land, San Jose, north Verginia, Sandiago, South Virginia, Bay point, Central Jersy, Chicago, Lehigh Valley, Richmind, North Jersy, Port Land, OshKosh, Buffalo, Brooklyn, Milwaki, charlotte, Boston, York, Kansas City, Detroit, Philadelphia, Long Island, Sacramento, Pittsburg, Albany, Albama, Cleveland, Baltimor, Miami, Hawai, Syracus, Phoenix, Tuscana, Georgia.

ಇನ್ನು ಕೆಲವು ಜಮಾಅತುಗಳಿಂದ ಜಮಾಅತ್‌ನ ಬಾಂಧವರು ದೀರ್ಘವಾದ ಪ್ರಯಾಣವನ್ನು ಬಳೆಸಿ ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಇಲ್ಲಿ ಆಗಮಿಸಿದ್ದರು. ಮೇರಿಲ್ಯೆಂಡಿನಿಂದ ಬರುವವರು 1367 ಮೈಲು, ಲಾಸ್ ಎಂಜಲಿಸ್‌ನಿಂದ ಬರುವವರು 1433 ಮೈಲು, Queens ನಿಂದ ಬರುವವರು 1578 ಮೈಲು ಮತ್ತು ಸ್ಯಾಟಲ್‌ನಿಂದ 2095 ಮೈಲು ದೀರ್ಘ ದಾರಿಯನ್ನು ಪ್ರಯಾಣಿಸಿ ತಮ್ಮ ಪ್ರೀತಿಯ ನೇತಾರರನ್ನು ನೋಡಲು ಮತ್ತು ಸ್ವಾಗತಿಸಲು ಡಲ್ಲಾಸ್ ತಲುಪಿದ್ದರು.

ಈ ಪುರುಷ ಸ್ತ್ರೀಯರಲ್ಲಿ ಒಂದು ದೊಡ್ಡ ಸಂಖ್ಯೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಮೊದಲನೇ ಬಾರಿಗೆ ನೋಡುವವರಾಗಿದ್ದರು. ದರ್ಶನ ಭಾಗ್ಯ ಪಡೆಯಲು ಒಂದೊಂದು ಕ್ಷಣಗಳನ್ನು ಸಹ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಕೊನೆಗೆ ಆ ಶುಭ ಘಳಿಗೆ ಬಂದೇ ಬಿಟ್ಟಿತು. ಆಗ ಸರಿಯಾಗಿ 3:50 ಗಂಟೆ ಸಮಯಕ್ಕೆ ಅವರ ವಾಹನ ಮುಖ್ಯದ್ವಾರ ಪ್ರವೇಶಿಸಿತು.

ಹುಝೂರೆ ಅನ್ವರ್(ಅತಬಿಅ) ವಾಹನದಿಂದ ಕೆಳಗೆ ಇಳಿಯುತ್ತಲೇ ಡಲ್ಲಾಸ್ ಜಮಾಅತಿನ ಉಪಾಧ್ಯಕ್ಷರು ಶ್ರೀ ಖಾಲಿದ್ Kirk ಸಾಹಿಬ್ ಡಲ್ಲಾಸಿನ ಆಮಿಲ ಸದಸ್ಯರೊಂದಿಗೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಶುಭ ಕೋರಿದರು. ಇನ್ನೊಂದೆಡೆ ಜಮಾಅತ್ ಬಾಂಧವರು ನಿರಂತರವಾಗಿ ಘೋಷ ವಾಕ್ಯಗಳನ್ನು ಉಚ್ಚರಿಸುತ್ತಿದ್ದರು. ಎಲ್ಲಾ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್! "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಹುಝೂರೆ ಅನ್ವರ್(ಅತಬಿಅ) ತಮ್ಮ ಕೈಯನ್ನು ಬೀಸುತ್ತಾ ಎಲ್ಲರಿಗೂ ವಅಲೈಕುಂ ಅಸ್ಸಲಾಮ್ ಹೇಳಿದರು. ಎಲ್ಲೆಡೆಯಿಂದ ಜಮಾಅತ್ ಬಾಂಧವರು ಸಹ ಕೈ ಬೀಸುತ್ತಾ ತಮ್ಮ ಸಂತೋಷ ವ್ಯಕ್ತಪಡಿಸುತ್ತಿದ್ದರು. ಪ್ರತಿಯೊಬ್ಬರು ದರ್ಶನ ಭಾಗ್ಯದಿಂದ ಆನಂದಿತರಾಗುತ್ತಿದ್ದರು. ಬಹಳಷ್ಟು ಜನರ ಕಣ್ಣುಗಳು ತೇವಗೊಂಡಿದ್ದರು. ಸ್ತ್ರೀಯರು ಮತ್ತು ಹುಡುಗಿಯರು ದರ್ಶನ ಭಾಗ್ಯ ಪಡೆಯುವ ಜೊತೆಯಲ್ಲಿ ತಮ್ಮ ಕೈಗಳನ್ನು ಬೀಸುತ್ತಾ ತಮ್ಮ ಖಲೀಫರಿಗೆ ಶುಭಾಗಮನ ಹೇಳುತ್ತಿದ್ದರು.

ಹುಝೂರೆ ಅನ್ವರ್(ಅತಬಿಅ) ಅವರ ಡಲ್ಲಾಸ್‌ಗೆ ಇದು ಪ್ರಥಮ ಭೇಟಿಯಾಗಿತ್ತು. ಇಂದು ಡಲ್ಲಾಸ್ ಭೂಮಿಯು ಸಹ ಹಝ್ರತ್ ಅಮೀರುಲ್ ಮುಮಿನೀನರ ಪಾದಸ್ಪರ್ಶ ಭಾಗ್ಯ ಪಡೆದ ಭೂಮಿಗಳಲ್ಲಿ ಸೇರಿಯಾಗಿತ್ತು. ಈಗ ಅಲ್ಲಾಹನ ಅನುಗ್ರಹದಿಂದ ಇಲ್ಲಿಯೂ ಸಹ ಅಭಿವೃದ್ಧಿಯ ಹೊಸ ಮಾರ್ಗಗಳು ತೆರೆಯುವುವು. ಮತ್ತು ಇನ್‌ಶಾಅಲ್ಲಾಹ್ ಯಶಸ್ಸಿನ ಹಾಗೂ ಅಭಿವೃದ್ಧಿಯ ಹೊಸ ಯುಗದ ಪ್ರಾರಂಭವಾಗುವುದು.

ಹುಝೂರೆ ಅನ್ವರ್(ಅತಬಿಅ) ಅವರಿಗೆ ತಂಗಲು ಮಸ್ಜಿದ್ ಬೈತುಲ್ ಇಕ್ರಾಮಿನ ಹೊರಾಂಗಣದಲ್ಲಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಜಮಾಅತ್ ಬಾಂಧವರ ಸಾಗುತ್ತ ತಮ್ಮ ವಸತಿ ಜಾಗಕ್ಕೆ ತಲುಪಿದರು.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.